ಐಕ್ಯರಂಗ

(ವಾರ ಪತ್ರಿಕೆ)

ಭಾರತಕಮ್ಯೂನಿಸ್ಟ್‌ಪಕ್ಷ[ಮಾರ್ಕ್ಸ್‌ವಾದಿ]ಕರ್ನಾಟಕರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 5 | ಸಂಚಿಕೆ 26 | ಜೂನ್ 26, 1983 | ಬೆಲೆ 60 ಪೈಸೆ

ಸಾಲ ಪರಿಹಾರ ಕುರಿತು ಮುಖ್ಯಮಂತ್ರಿಗಳೊಂದಿಗೆ
ರೈತ ಪ್ರತಿನಿಧಿಗಳ ಚರ್ಚೆ

ವಿವಿಧ ರೈತ ಸಂಘದ ಪ್ರತಿನಿಧಿಗಳೊಂದಿಗೆ ಮುಖ್ಯ ಮಂತ್ರಿಗಳು ಮತ್ತು ಇನ್ನಿತರ ಮಂತ್ರಿಮಂಡಲದ ಸದಸ್ಯರು ಉಪಸ್ಥಿತರಿದ್ದು ಮುಖ್ಯವಾಗಿ ರೈತರಿಗೆ ಸಾಲಪರಿಹಾರ ಕುರಿತು ಸಮಾಲೋಚನೆ ನಡೆಸಲಾಯಿತು. ಮುಖ್ಯವಾಗಿ ಸಾಲಪರಿಹಾರ ಕುರಿತು ವಿವಿಧ ರೈತ ಸಂಘಗಳ ಅಭಿಪ್ರಾಯವನ್ನು ಸಂಗ್ರಹಿಸುವ ಉದ್ದೇಶ್ಯ ಹೊಂದಿತ್ತು. ಇವತ್ತು ಭಾಗವಹಿಸಿದ ರೈತ ಸಂಘಗಳು ಸರಕಾರದ ಕೆಲವು ಧೋರಣೆಗಳನ್ನು ಸ್ವಾಗತಿಸಿರುವುದಕ್ಕೆ ಮುಖ್ಯ ಮಂತ್ರಿಗಳು ತಮ್ಮ ಅಭಿನಂದನೆ ಸಲ್ಲಿಸಿ ತಮ್ಮ ಸರ್ಕಾರ ಬರೀ ಆಶ್ವಾಸನೆ ಕೊಡುವುದರಲ್ಲೇ ತೃಪ್ತಿ ಪಡದೆ ಕೆಲಸ ಮಾಡಲು ಉದ್ಯುಕ್ತರಾಗಿದ್ದೇವೆಂದು ಅವರು ಆಗಿಂದಾಗ್ಯೆ ರೈತಪ್ರತಿನಿಧಿಗಳೊಂದಿಗೆ ಸಮಾಲೋಚಿಸುವುದಾಗಿಯೂ ಸಮಸ್ಯೆಗಳನ್ನು ಬಗೆಹರಿಸಲು ಪ್ರಯತ್ನಿಸುವುದಾಗಿಯೂ ಅಭಿಪ್ರಾಯ ವ್ಯಕ್ತಪಡಿಸಿದರು.

ಕರ್ನಾಟಕ ಪ್ರಾಂತ್ಯ ರೈತ ಸಂಘವನ್ನು ಪ್ರತಿನಿಧಿಸಿ ಪ್ರಧಾನ ಕಾರ್ಯದರ್ಶಿ ವಿ. ಎನ್. ಹಳಕಟ್ಟಿ ಮಾತನಾಡಿ ಬಡ ಮತ್ತು ಸಣ್ಣ ವರ್ಗದ ರೈತರಿಗೆ ಅಸಲು ಮತ್ತು ಬಡ್ಡಿ ಎರಡನ್ನೂ ಮನ್ನಾ ಮಾಡಬೇಕಲ್ಲದೆ ಇತರ ರೈತರಿಗೆ ಬಡ್ಡಿ ಮನ್ನಾ ಮಾಡಿ ಅಸಲನ್ನು ಮಾತ್ರ ಒಂದೆರಡು ಕಂತುಗಳಲ್ಲಿ ಮರುಪಾವತಿ ಮಾಡಲು ಅವಕಾಶ ಮಾಡಿಕೊಡಬೇಕೆಂದು ಅಭಿಪ್ರಾಯ ವ್ಯಕ್ತಪಡಿಸಿದರು. ರೈತರ ಬೆಳೆಗೆ ಲಾಭದಾಯಕ ಬೆಲೆಗಳು ಇಲ್ಲದ್ದರಿಂದಾಗಿ ರೈತರು ಬಿಕ್ಕಟ್ಟಿಗೀಡಾಗಿ ಸಾಲ ತೀರಿಸದಂತಾಗಿದೆ. ಆದಕ್ಕಾಗಿ ಪರಿಹಾರ ಅತ್ಯವಶ್ಯಕವಾಗಿದೆಯೆಂದು ಹೇಳಿದರು. ಈಗ ಸರಕಾರ ಸಾಲ ಮರು ಪಾವತಿಗೆ ನಿರ್ಧರಿಸಿರುವ ಅವಧಿಯನ್ನು ವಿಸ್ತರಿಸಬೇಕೆಂದು ಆ ಬಳಿಗಾಗಿ ಒಂದು ಸೂಕ್ತ ಪರಿಹಾರ ನೀಡಲು ಕ್ರಮ ಕೈಗೊಳ್ಳಬೇಕೆಂದು ಆದರ ಬಗ್ಗೆ ಒಂದು ನಿರ್ದಿಷ್ಟ ನಿಲುವಿಗೆ ಬರಲು ರೈತ ಪ್ರತಿನಿಧಿಗಳನ್ನು ಒಳಗೊಂಡ ಸಮಿತಿಯನ್ನು ನೇಮಿಸುವುದು ಸೂಕ್ತವೆಂದು ಸೂಚನೆಯಿತ್ತರು. ಕರ್ನಾಟಕ ಪ್ರಾಂತ್ಯರೈತ ಸಂಘದ ನಿಲುವು ಸ್ಪಷ್ಟ ಸರಕಾರ ನೀಡಿದ ಗ್ರಾಮೀಣ ಸಾಲ ಬಹಳ ಕಡಿಮೆ ಪ್ರಮಾಣದ್ದು ಬಡ್ಡಿ ಹೆಚ್ಚಿನದು, ಸಿಕ್ಕ ಸಾಲ ಕೂಡ್ಡ ಹೆಚ್ಚು ಪ್ರಮಾಣದ್ದು ದೊಡ್ಡ ರೈತರಿಗೆ ಸಿಕ್ಕುವಂತಾಗಿದೆ. ಗ್ರಾಮೀಣ ಸಾಲವನ್ನು ಹೆಚ್ಚಿನ ಪ್ರಮಾಣಕ್ಕೆ ಏರಿಸಬೇಕು. ಸರಣ ಮತ್ತು ಕಡಿಮೆ ಬಡ್ಡಿ ದರ ನಿಗದಿಯಾಗಬೇಕು. ಸಾಲ ಸಿಗುವಾಗ ಬಡ ಮತ್ತು ಸಣ್ಣ ರೈತರಿಗೆ ಹೆಚ್ಚು ಪಾಶಸ್ತ್ಯ ನೀಡಬೇಕು. ಈಗಾಗಲೇ ಮರುಪಾವತಿ ಮಾಡಿದವರಿಗೆ ಈ ವರ್ಷ ಸಾಲ ಕೊಡುವಾಗ ಪ್ರಾಶಸ್ತ್ಯ ನೀಡಬೇಕು.

ಶೆಡೂಲ್ಡ್ ಬ್ಯಾಂಕ್ ಕಟ್‌ಬಾಕಿ ಸಾಲಕ್ಕೂ ಬಡ್ಡಿ ರಿಯಾಯಿತಿ ನೀಡುವಂತಾಗಬೇಕು. ಸರ್ಕಾರದ ಐ.ಎಲ್.ಡಿ ಮತ್ತು ಸಹಕಾರಿ ಸೊಸೈಟಿಗಳಿಗೆ ಮಾತ್ರವಲ್ಲದೆ ಇನ್ನಿತರ ರೈತರಿಗೆ ಸಾಲ ಒದಗಿಸುವ ಸಂಸ್ಥೆಗಳಿಗೂ ರಿಯಾಯಿತಿ ವಿಸ್ತರಿಸಬೇಕು. ಹೀಗೆ ಹೇಳುವಾಗ ಕರ್ನಾಟಕ ಪ್ರಾಂತ ರೈತ ಸಂಘ ಈ ಸರ್ಕಾರದ ಇತಿಮಿತಿಗಳನ್ನು ತಿಳಿದು ಮಾತನಾಡುತ್ತದೆ. ಸಹಕಾರಿ ಚಳುವಳಿ ಸಂಸ್ಥೆ ಉಳಿಯಬೇಕು. ಅವು ಇನ್ನಷ್ಟು ಬಲಿಷ್ಟಗೊಂಡು ಬಡ ಮತ್ತು ಸಣ್ಣ ರೈತರಿಗೆ ಸಹಕಾರಿ ಸಾಲ ಸಿಗುವಂತಾಗಬೇಕು,

ಈಗ ಸಾಲಮರುಪಾವತಿ ವಿರುದ್ಧ ಬಂಡೆದ್ದ ವಿಶಿಷ್ಟ ಹಿತಾಶಕ್ತಿಗಳು ಜನತಾ ಸರ್ಕಾರವನ್ನೇ ಅಸ್ಥಿರಗೊಳಿಸುವ ಹೊಂಚು ಹಾಕುತ್ತಿರುವುದನ್ನು ಕರ್ನಾಟಕ ಪ್ರಾಂತ ರೈತ ಸಂಘ ಖಂಡಿಸುತ್ತದೆ.

ನಂತರದ ಚರ್ಚೆಯಲ್ಲಿ ಪಿ. ರಾಮಚಂದ್ರರಾವ್ ಅಧ್ಯಕ್ಷರು, ಚಂದ್ರಶೇಖರ ಬಾಳೆ, ಪಿ. ಜಗನ್ನಾಥ ಕೂಡ ಭಾಗವಹಿಸಿದ್ದರು. ಕೆಲವು ಉಪಯುಕ್ತ ಪ್ರಶ್ನೆಗಳನ್ನೆತ್ತಿದ್ದರು. ಬರಗಾಲದಿಂದಾಗಿ ಸರ್ಕಾರ ನೀಡಿದ ರಿಯಾಯಿತಿಗಳನ್ನು ಉಪಯೋಗಿಸಲು ಸಾಧ್ಯವಾಗಿಲ್ಲವೆಂದು ಒತ್ತಿಹೇಳಿದರು. ರುದ್ರಪ್ಪ ನೇತೃತ್ವದ ರೈತ ಸಂಘದ ಪ್ರತಿನಿಧಿಗಳು ಸಭೆಯಲ್ಲಿ ಹಾಜರಿರಲಿಲ್ಲ.

ಸಭೆಯಲ್ಲಿ ಭಾಗವಹಿಸಿದ ರೈತ ಸಂಘಗಳಲ್ಲಿ ಸಾಲ ಮರು ಪಾವತಿ ಮಾಡಲು ರಿಯಾಯಿತಿ ಅವಧಿಯನ್ನು ಒಂದು ವರ್ಷಕ್ಕಾದರೂ ವಿಸ್ತರಿಸಬೇಕೆನ್ನುವುದರಲ್ಲಿ ಸರ್ವಾನುಮತದ ಒಪ್ಪಿಗೆಯಿತ್ತು.

ಸರ್ಕಾರದ ಪರವಾಗಿ ಕೊನೆಯಲ್ಲಿ ಮಾತನಾಡಿದ ಮುಖ್ಯ ಮಂತ್ರಿಗಳು ಯಾವ ಸ್ಪಷ್ಟ ನಿರ್ಣಯವನ್ನು ಸಾಲ ಮರುಪಾವತಿ ಮಾಡುವ ಅವಕಾಶ ಅವಧಿಯ ಬಗ್ಗೆ ಕೊಡಲಿಲ್ಲ. ಅದನ್ನು ಪರಿಶೀಲಿಸುವುದಾಗಿ ಆಶ್ವಾಸನೆ ಕೊಡಲಾಗಿದೆ.

ಈ ಬಗ್ಗೆ ಜೂನ್ 19, 20ರಂದು ಬೆಂಗಳೂರಿನಲ್ಲಿ ಸೇರಿದ್ದ ಕರ್ನಾಟಕ ಪ್ರಾಂತ ರೈತ ಸಂಘದ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಸರಕಾರವನ್ನು ಒತ್ತಾಯಿಸಲು ದಿನಾಂಕ 27–6–83 ರಂದು ಜಿಲ್ಲಾ ಕೇಂದ್ರಗಳಲ್ಲಿ ಶಾಂತ ರೀತಿಯಲ್ಲಿ ಒತ್ತಾಯಿಸಲು ಧರಣಿ ಮೆರವಣಿಗೆ ನಡೆಸುವುದನ್ನು ನಿರ್ಣಯಿಸಲಾಗಿದೆ.

ಆದ್ದರಿಂದ ಸರ್ಕಾರವು ಕೂಡಲೇ ತೀವ್ರ ಬಿಕ್ಕಟ್ಟಿನಲ್ಲಿರುವ ರೈತರಿಗೆ ಸೂಕ್ತ ಸಾಲ ಪರಿಹಾರ ನೀಡಲು ಕರ್ನಾಟಕ ಪ್ರಾಂತ ರೈತ ಸಂಘ ಒತ್ತಾಯಿಸುತ್ತದೆ.

ಕ್ಯಾಪಿಟೇಶನ್ ಶುಲ್ಕ ರದ್ದಾಗಲಿ
ಭೂ ಛಿದ್ರೀಕರಣ ಕಾನೂನು ತಿದ್ದುಪಡಿಯಾಗಲಿ
ಸಿ. ಪಿ. ಐ. (ಎಂ) ರಾಜ್ಯ ಸೆಕ್ರೆಟೇರಿಯೇಟ್ ಆಗ್ರಹ

ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ರಾಜ್ಯ ಸೆಕ್ರೆಟೇರಿಯೇಟ್ 18–6–83ರಂದು ಸಭೆ ಸೇರಿ ರಾಜ್ಯದ ಎಲ್ಲಾ ಮೆಡಿಕಲ್ ಕಾಲೇಜುಗಳಲ್ಲಿ ಹಾಗೂ ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಕ್ಯಾಪಿಟೇಶನ್ ಶುಲ್ಕವನ್ನು ರದ್ದುಗೊಳಿಸಬೇಕೆಂದು ಸಿಂಧ್ಯಾ ನೇತೃತ್ವದ ಸಮಿತಿಯು ಶಿಫಾರಸು ಮಾಡಿರುವುದನ್ನು ಪ್ರಶಂಸಿಸಿದೆ. ಸಿಂಧ್ಯಾ ಸಮಿತಿಯು ಮಾಡಿರುವ ಈ ಶಿಫಾರಸ್ಸು ಜನತಾ ಪಕ್ಷದ ಚುನಾವಣಾ ಪ್ರಣಾಳಿಕೆಗೆ ಅನುಗುಣವಾಗಿದೆ ಮತ್ತು ರಾಜ್ಯದ ಜನತೆಯ ಮತ್ತು ಎಡ ಶಕ್ತಿಗಳ ಇಚ್ಛೆಗನುಸಾರವಾಗಿದೆ. ಎಲ್ಲಾ ಉಪ ಕುಲಪತಿಗಳೂ ಸಿಂಧ್ಯ ಸಮಿತಿಯ ಸದಸ್ಯರಾಗಿರುವರೆಂಬುದು ಕೂಡ ಗಮನಿಸಬೇಕಾದ ಅಂಶವಾಗಿದೆಯೆಂದು ಪ್ರಕಟಣೆ ತಿಳಿಸಿದೆ.

ಜನತಾ ಸರ್ಕಾರವು ಸಮಿತಿಯ ಶಿಫಾರಸ್ಸನ್ನು ಅಂಗೀಕರಿಸುವ ಬದಲು ಸ್ಥಾಪಿತ ಹಿತಾಸಕ್ತಿಗಳ ಪ್ರಭಾವಕ್ಕೆ ಮಣಿದು ಸಮಿತಿಯ ಶಿಫಾರಸ್ಸನ್ನು ನಿರಾಕರಿಸುವ ದಿಕ್ಕಿನಲ್ಲಿ ಮಂತ್ರಿ ಮಂಡಲದ ಉಪ ಸಮಿತಿಯೊಂದನ್ನು ರಚಿಸಿದೆ.

ಸಿ. ಪಿ. ಐ. (ಎಂ) ನ ರಾಜ್ಯ ಸೆಕ್ರೆಟೇರಿಯೆಟ್ ಸರ್ಕಾರವು ಕೂಡಲೇ ಸಿಂಧ್ಯಾ ಸಮಿತಿಯ ಶಿಫಾರಸನ್ನು ಅಂಗೀಕರಿಸಿ ಎಲ್ಲಾ ಕಾಲೇಜುಗಳಲ್ಲೂ ಕ್ಯಾಪಿಟೇಶನ್ ಶುಲ್ಕವನ್ನು ರದ್ದುಗೊಳಿಸಬೇಕೆಂದು ಒತ್ತಾಯಿಸಿದೆ.

ಭೂ ಛಿದ್ರೀಕರಣ ಪ್ರತಿಬಂಧಕ ಕಾನೂನು ಕುರಿತು

ಕರ್ನಾಟಕದ ರೈತರು ಮತ್ತು ಸಣ್ಣ ಹಿಡುವಳಿದಾರರು ತಮ್ಮ ಹಣಕಾಸಿನ ತೊಂದರೆಗಳಿಂದಾಗಿ ತಮ್ಮ ಭೂಮಿಯನ್ನು ಮಾರಾಟ ಮಾಡಲು ಅನುಕೂಲವಾಗುವಂತೆ ಈಗಿರುವ ಭೂ ಛಿದ್ರೀಕರಣ ತಡೆ ಕಾನೂನನ್ನು ಬದಲಾವಣೆ ಮಾಡಬೇಕೆಂದು ರಾಜ್ಯ ಸರ್ಕಾರವನ್ನು ಒತ್ತಾಯಿಸುತ್ತಿದ್ದಾರೆ.

ಈಗಿರುವ ಭೂ ಛಿದ್ರೀಕರಣ ಕಾನೂನಿಗೆ ಯೋಗ್ಯ ತಿದ್ದುಪಡಿಗಳನ್ನು ವಿಶೇಷಾಜ್ಞೆಯ ಮೂಲಕ ಜ್ಯಾರಿಗೆ ತರಬೇಕೆಂದು ಸಿ. ಪಿ. ಐ. (ಎಂ) ನ ರಾಜ್ಯ ಸೆಕ್ರೆಟೇರಿಯೇಟ್ ರಾಜ್ಯ ಸರ್ಕಾರವನ್ನು ಒತ್ತಾಯಿಸಿದೆ.

ಕರ್ನಾಟಕದ ಮಾನ್ಯ ರಾಜ್ಯಪಾಲರು ಈ ವಿಶೇಷಾಜ್ಞೆಗೆ ತಮ್ಮ ಒಪ್ಪಿಗೆಯನ್ನು ನೀಡದೇ ಇರುವುದು ತೀರಾ ಆಶ್ಚರ್ಯಕರವಾಗಿದೆಯೆಂದು ಸೆಕ್ರೆಟೇರಿಯೇಟ್ ತನ್ನ ಪ್ರಕಟನೆಯಲ್ಲಿ ತಿಳಿಸಿದೆ.

ಬಡರೈತರ ಮತ್ತು ಸಣ್ಣ ಹಿಡುವಳಿದಾರರ ಹಿತ ದೃಷ್ಟಿಯಿಂದ ಕರ್ನಾಟಕದ ಮಾನ್ಯ ರಾಜ್ಯಪಾಲರು ಸರ್ಕಾರದ ವಿಶೇಷಾಜ್ಞೆಗೆ ತಮ್ಮ ಅನುಮತಿಯನ್ನು ನೀಡಬೇಕೆಂದು ಸಿ. ಪಿ. ಐ. (ಎಂ) ರಾಜ್ಯ ಸೆಕ್ರೆಟೇರಿಯೆಟ್ ರಾಜ್ಯಪಾಲರನ್ನು ವಿನಂತಿಸಿದೆ.

ಚೀನಾದ ಹೊಸ ಅಧ್ಯಕ್ಷರಾಗಿ
ಲಿ-ಸಿಯಾ-ನಿಯೆನ್ ಆಯ್ಕೆ

ಚೀನಾದ ಹೊಸ ಅಧ್ಯಕ್ಷರನ್ನಾಗಿ 78 ವರ್ಷ ವಯಸ್ಸಿನ ಲಿ–ಸಿಯಾ–ನಿಯೆನ್ ಅವರನ್ನು ಆರನೆಯ ಜನತಾ ಕಾಂಗ್ರೆಸ್ (ಚೀನಾದ ಲೋಕಸಭೆ) ಐದು ವರ್ಷದ ಅವಧಿಗೆ ಚುನಾಯಿಸಿದೆ.

ಹಿಂದಿನ ಅಧ್ಯಕ್ಷರಾಗಿದ್ದ ಲಿಯು–ಷಾವೋ–ಕಿ 'ಸಾಂಸ್ಕೃತಿಕ ಕ್ರಾಂತಿ'ಯ ಸಂದರ್ಭದಲ್ಲಿ 1969ರಲ್ಲಿ ನಿಧನರಾಗಿದ್ದರು. ಅದರ ನಂತರ ಅಧ್ಯಕ್ಷ ಪದವಿಯನ್ನು ರದ್ದುಗೊಳಿಸಲಾಗಿತ್ತು. ಈಗ ಮತ್ತೆ ಈ ಪದವಿಯನ್ನು ಪುನಃ ಸ್ಥಾಪಿಸಲಾಗಿದೆ. ಅಷ್ಟೇ ಅಲ್ಲದೆ ಚೀನದ ಮಹಾನ್ ಮಾರ್ಕ್ಸ್‌ವಾದಿಯಾಗಿದ್ದ ಲಿಯು–ಷಾವೋ–ಕಿ ಅವರ ಚಿಂತನೆಯನ್ನು ಮತ್ತೆ ಜೀವಂತಗೊಳಿಸಲಾಗುತ್ತಿದೆ.

ಚೀನದ ಹೊಸ ಕೇಂದ್ರೀಯ ಸೈನಿಕ ಕಮಿಷನ್‌ಗೆ ಡೆಂಗ್–ಕ್ಸಿಯಾವೋ–ಪಿಂಗ್ ಆಯ್ಕೆಯಾಗಿದ್ದಾರೆ. ಇವರು 42 ಲಕ್ಷ ಸೈನಿಕರನ್ನೊಳಗೊಂಡ ಸೈನ್ಯಕ್ಕೆ ನಾಯಕರಾಗಿದ್ದಾರೆ.

ಚಾವೋ–ಜಿಯಾಂಗ್ ಚೀನಾದ ಪ್ರಧಾನ ಮಂತ್ರಿಯಾಗಿ ಪುನಃ ಆಯ್ಕೆಯಾಗಿದ್ದಾರೆ.

ದಿವಂಗತ ಚೌ-ಎನ್-ಲಾಯ್ ಅವರ ಪತ್ನಿ ಡೆಂಗ್-ಪಿಂಗ್-ಸ್ಕೋ ಅವರನ್ನು ಚೀನಾದ ಜನತಾ ರಾಜಕೀಯ ಸಲಹಾ ಸಮಿತಿಯ ಅಧ್ಯಕ್ಷರನ್ನಾಗಿ ಚುನಾಯಿಸಲಾಗಿದೆ. ಇವರು ಚೀನೀ ಕಮ್ಯೂನಿಸ್ಟ್ ಪಕ್ಷದ ಪೊಲಿಟ್ ಬ್ಯೂರೋ ಸದಸ್ಯರೂ ಆಗಿದ್ದಾರೆ.

ನೆರೆಹೊರೆ

ಮಹಾರಾಷ್ಟ್ರ ಕೃಷಿ ಕಾರ್ಮಿಕರ ಸಂಘ : ಪ್ರಥಮ ಸಮ್ಮೇಳನ

ಅಂಬರ್‌ಸಿಂಗ್ ಮಹಾರಾಜ್ ಮಹಾರಾಷ್ಟ್ರದ ಧುಳೆ ಜಿಲ್ಲೆಯಲ್ಲಿ ಕೃಷಿ ಕಾರ್ಮಿಕರ ಚಳವಳಿ ಸಂಘಟಿಸುವುದರಲ್ಲಿ ತನ್ನ ಪ್ರಾಣವನ್ನೇ ಅರ್ಪಿಸಿದವರು. ಅವರ ಕುಟುಂಬವಿಡೀ ಸಮಾಜದ ಈ ಅತ್ಯಂತ ದಲಿತ ವಿಭಾಗವನ್ನು ಸಂಘಟಿಸುವ ಹೋರಾಟದಲ್ಲಿ ಹಲವು ಸಂಕಷ್ಟಗಳನ್ನು ಎದುರಿಸಬೇಕಾಯಿತು. ಈ ಜಿಲ್ಲೆಯ ಶಹಾದಾ ಪಟ್ಟಣದಲ್ಲಿ ಮೇ 8ರಂದು ಅತ್ಯುತ್ಸಾಹದಿಂದ ನಡೆದ ಮಹಾರಾಷ್ಟ್ರ ಕೃಷಿ ಕಾರ್ಮಿಕರ ಸಂಘದ ಪ್ರಥಮ ರಾಜ್ಯ ಸಮ್ಮೇಳನದ ಜಾಗಕ್ಕೆ ಈ ನಾಯಕನ ಹೆಸರನ್ನೇ ಇಡಲಾಗಿತ್ತು. ಅಂಬರ ಸಿಂಗರ ವಯೋವೃದ್ಧ ತಂದೆ ಪನ್ಯಭಾವು ಸುರತ್‌ವಂತಿ ನಡೆಸಿದ ಅಖಿಲ ಭಾರತ ಕೃಷಿ ಕಾರ್ಮಿಕರ ಸಂಘದ ಕೆಂಪು ಬಾವುಟದ ಆರೋಹಣದೊಂದಿಗೆ ಸಮ್ಮೇಳನ ಆರಂಭವಾಯಿತು. ಸಿ. ಪಿ. ಐ. (ಎಂ) ನ ಕೇಂದ್ರ ಸಮಿತಿ ಸದಸ್ಯೆ ಅಹಲ್ಯಾ ರಂಗಣೇಕರ್ ಉದ್ಘಾಟನಾ ಭಾಷಣ ಮಾಡಿದರು. ಸಂಘದ ಸುಮಾರು 10 ಸಾವಿರ ಸದಸ್ಯರನ್ನು ಪ್ರತಿನಿಧಿಸುವ 125 ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸಿದರು. ಇವರಲ್ಲಿ ಹೆಚ್ಚಿನವರು ಆದಿವಾಸಿಗಳು ಠಾಣೆ ಜಿಲ್ಲೆಯ ಸಿ. ಪಿ. ಐ. (ಎಂ) ನ ಆದಿವಾಸಿ ಎಂ. ಎಲ್. ಎ. ಹಾಗೂ ಅಖಿಲ ಭಾರತ ಕೃಷಿ ಕಾರ್ಮಿಕರ ಸಂಘದ ಮಹಾರಾಷ್ಟ್ರ ಸಮಿತಿಯ ಅಧ್ಯಕ್ಷ ಲಹಾನು ಕೋಮ್ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದರು.

ಮಹಾರಾಷ್ಟ್ರದಲ್ಲಿ ಕೃಷಿ ಕಾರ್ಮಿಕರ ಶೋಚನೀಯ ಪರಿಸ್ಥಿತಿಯ ಹಿನ್ನೆಲೆಯಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ನಡೆಸಿದ ಚಟುವಟಿಕೆಗಳ ವರದಿಯನ್ನು ಸಂಘದ ಕಾರ್ಯದರ್ಶಿ ಕುಮಾರ ಶಿರಾಲ್‌ಕರ್ ಒಪ್ಪಿಸಿದರು. ರಾಜ್ಯಾದ್ಯಂತ ಚಟುವಟಿಕೆಗಳನ್ನು ವಿಸ್ತರಿಸುವ ತುರ್ತು ಅಗತ್ಯದ ಬಗ್ಗೆ ವರದಿಯಲ್ಲಿ ಒತ್ತು ನೀಡಲಾಗಿತ್ತು. ಕಾರ್ಲ್‌ಮಾರ್ಕ್ಸ್‌ರ ಮರಣ ಶತಾಬ್ಧಿ ವರ್ಷ, ಕನಿಷ್ಟ ಕೂಲಿ, ಬರ ಪರಿಸ್ಥಿತಿ, ಉದ್ಯೋಗ ಭರವಸೆ ಯೋಜನೆ, ದಲಿತರು, ಹೆಂಗಸರು ಹಾಗೂ ಆದಿವಾಸಿಗಳ ಮೇಲೆ ಹಲ್ಲೆಗಳು, ಅಸ್ಸಾಂ ಹಾಗೂ ಪಂಜಾಬ್‌ನ ಪರಿಸ್ಥಿತಿ, ಸರಕಾರ ಹಾಗೂ ಭೂ ಮಾಲಕರ ದಬ್ಬಾಳಿಕೆಯ ಖಂಡನೆ ಹಾಗೂ ಕೃಷಿ ಕಾರ್ಮಿಕರ ಉಕ್ಕಿನ ಒಗ್ಗಟ್ಟಿಗೆ ಕರೆ ಇವೆಲ್ಲದರ ಬಗ್ಗೆ ಪ್ರತ್ಯೇಕ ಠರಾವುಗಳನ್ನು ಮಂಡಿಸಲಾಯಿತು. ಅವುಗಳಿಗೆ ಬೆಂಬಲವಾಗಿ ಮಾತನಾಡಿದ ಎಲ್ಲಾ ಪ್ರತಿನಿಧಿಗಳು ತಮ್ಮ ಜಿಲ್ಲೆಗಳ ಅನುಭವಗಳನ್ನು ಕಣ್ಣಿಗೆ ಕಟ್ಟುವಂತೆ ಸ್ಫೂರ್ತಿಯಿಂದ ಬಣ್ಣಿಸಿದರು.

ಸಮ್ಮೇಳನದ ಕೊನೆಗೆ 5000 ಜನರು ಭಾಗವಹಿಸಿದ್ದ ಮೆರವಣಿಗೆ ಶಹಾದಾ ಪಟ್ಟಣದ ಬೀದಿಗಳನ್ನು ಹಾದು ಸಾರ್ವಜನಿಕ ಸಭೆಯೊಂದಿಗೆ ಮುಕ್ತಾಯಗೊಂಡಿತು. ಈ ಸಭೆಯಲ್ಲಿ 8000 ಜನ ಭಾಗವಹಿಸಿದರು. ನಂತರ ರಾತ್ರಿಯಿಡೀ ನಡೆದ ವಿಶಿಷ್ಟ ಸಾಂಸ್ಕೃತಿಕ ಕಾರ್ಯಕ್ರಮ ಜನರನ್ನು ಆಕರ್ಷಿಸಿತು. ಮೇ 8ರಂದು ಶಹಾದಾ ಪಟ್ಟಣ ಅತ್ಯುತ್ಸಾಹದ ಬೀಡಾಗಿತ್ತು.

ವಿದ್ಯಾರ್ಥಿ ನಾಯಕರ ಹುಂಬ ಸಮರಶೀಲತೆ-ಬಲಪಂಥೀಯರಿಗೆ ಗ್ರಾಸ

ದೆಹಲಿಯ ಜವಾಹರ್ ಲಾಲ್ ನೆಹರೂ ವಿಶ್ವವಿದ್ಯಾಲಯದ ವಿದ್ಯಾರ್ಥಿ ಸಂಘ ಹಾಗೂ ವಿಶ್ವವಿದ್ಯಾಲಯದ ವಿದ್ಯಾರ್ಥಿ ಸಂಸ್ಥೆ ವಿದ್ಯಾರ್ಥಿಗಳ ಪ್ರಜಾಪ್ರಭುತ್ವವಾದೀ ಬೇಡಿಕೆಗಳನ್ನು ಈಡೇರಿಸಿಕೊಳ್ಳುವ ತಮ್ಮ ಹೋರಾಟಗಳನ್ನು ಜನಸಮುದಾಯದ ಹೋರಾಟಗಳೊಡನೆ ಸಮರಸಗೊಳಿಸುವ ಒಂದು ಬಲಿಷ್ಠ, ಜವಾಬ್ದಾರಿಯುತ ವಿದ್ಯಾರ್ಥಿ ಸಂಘಟನೆಯೆಂಬ ಖ್ಯಾತಿ ಪಡೆದಿದೆ. ಆದರೆ ಕಳೆದ ಮೇ ತಿಂಗಳಿಂದ ವಿಶ್ವವಿದ್ಯಾಲಯದಲ್ಲಿ ನಡೆದ ಘಟನೆಗಳು ಆ ಹೆಸರಿಗೆ ಮಸಿ ಬಳಿದಿವೆ; ವಿದ್ಯಾರ್ಥಿಗಳ ಇದುವರೆಗಿನ ಸಾಧನೆಗಳು ನಿಷ್ಫಲಗೊಳ್ಳುವ ಅಪಾಯ ತಂದೊಡ್ಡಿವೆ; ವಿದ್ಯಾರ್ಥಿ ಚಳವಳಿಯನ್ನು ಛಿದ್ರಗೊಳಿಸಿ, ತಪ್ಪುದಾರಿಗೆಳೆಯಲು ಸದಾ ಅವಕಾಶಕ್ಕಾಗಿ ಹಾತೊರೆಯುತ್ತಿರುವ ಕೇಂದ್ರ ಸರಕಾರ, ದೆಹಲಿಯ ಉಪರಾಜ್ಯಪಾಲ ಹಾಗೂ ಆರ್. ಎಸ್. ಎಸ್. ಇತ್ಯಾದಿ ಎಡವಿರೋಧಿಗಳ ಅಪಪ್ರಚಾರಕ್ಕೆ ಗ್ರಾಸ ಒದಗಿಸಿದೆ.

ಈ ಪರಿಸ್ಥಿತಿ ಉಂಟಾಗಲು ವಿದ್ಯಾರ್ಥಿ ಸಂಘದ ಬಹುಸಂಖ್ಯಾತ ನಾಯಕತ್ವದ ದೂರ ದೃಷ್ಟಿಯಿಲ್ಲದ, ಸಮಯ ಸಾಧಕ, ಹುಂಬ ಸಮರಶೀಲತೆಯ ಧೋರಣೆಗಳು ಕಾರಣ. 1982ರ ಅಕ್ಟೋಬರ್‌ನಲ್ಲಿ ನಡೆದ ಚುನಾವಣೆಗಳಲ್ಲಿ ಎಸ್. ಎಫ್. ಐ. ಅಲ್ಪಮತಕ್ಕಿಳಿದುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಕಳೆದ ಒಂದು ದಶಕದಲ್ಲಿ ಎಸ್. ಎಫ್. ಐ. ನೇತೃತ್ವದ ಸಂಘಗಳು ವಿದ್ಯಾರ್ಥಿ ಸಂಘಟನೆಯ ಬಗ್ಗೆ ಸರಿಯಾದ ದೃಷ್ಟಿಕೋಣ ಪಡೆದಿದ್ದು ತಮ್ಮ ಬೇಡಿಕೆಗಳನ್ನು ದೇಶದಲ್ಲಿ ಶಿಕ್ಷಣ ಪದ್ಧತಿಯನ್ನೇ ಬದಲಿಸುವ ಹೋರಾಟದೊಂದಿಗೆ, ದೇಶದಲ್ಲಿ ಮೂಲಭೂತ ಬದಲಾವಣೆ ತರಬೇಕೆನ್ನುವ ಭಾರತೀಯ ಜನತೆಯ ಹೋರಾಟಗಳೊಂದಿಗೆ ಸಮರಸಗೊಳಿಸಿ ತಮ್ಮ ಸಂಘವನ್ನು ಒಂದು ಕಾರ್ಯಶೀಲ ಬಲಿಷ್ಠ ಸಂಘಟನೆಯನ್ನಾಗಿ ರೂಪಿಸಿದ್ದವು. ಆದರೆ ಈ ಸಲ ಬಹುಮತ ಗಳಿಸಿದ ಸಮತಾ ಯುವಜನ ಸಭಾ [ಜನತಾ, ಸಮಾಜವಾದಿ ಹಾಗೂ ಲೋಕದಳ ಇತ್ಯಾದಿಗಳ ಮಿಶ್ರ ಸಂಘಟನೆ]ದ ನಾಯಕತ್ವದ ಹುಂಬ ಸಮರಶೀಲತೆ ವಿಶ್ವವಿದ್ಯಾಲಯದಲ್ಲಿ ಅರಾಜಕತ್ವ ಹರಡಿದೆ. ನರೆಯ ಸಿನೆಮಾ ಹಾಲಿನ ನೌಕರರೊಂದಿಗೆ ಘರ್ಷಣೆ ಈ ಹುಂಬ ಸಮರಶೀಲತೆಗೆ ಒಂದು ಉದಾಹರಣೆ.

ಅಸಭ್ಯ ವರ್ತನೆಯ ಆಪಾದನೆಯ ಮೇಲೆ ಒಬ್ಬ ವಿದ್ಯಾರ್ಥಿಯನ್ನು ಒಂದು ಹಾಸ್ಟೆಲಿನಿಂದ ಇನ್ನೊಂದಕ್ಕೆ ವರ್ಗಾಯಿಸಿದ ಸಣ್ಣ ಘಟನೆ ಪ್ರಸ್ತುತ ವಿದ್ಯಾರ್ಥಿ ನಾಯಕತ್ವದ ಮೇಲೆ ಹೇಳಿದ ತಮ್ಮ ಧೋರಣೆಗಳಿಂದಾಗಿ ಬೆಳೆದು ಸಂಘದ ಅಧ್ಯಕ್ಷ ಹಾಗೂ ಪ್ರಧಾನ ಕಾರ್ಯದರ್ಶಿ ವಿಶ್ವವಿದ್ಯಾಲಯದಿಂದ ಅಮಾನತುಗೊಳ್ಳಬೇಕಾಯಿತು. ಈ ಹಿಂದೆ ಇಂತಹ ಘಟನೆಗಳು ನಡೆದಾಗ ತಕ್ಷಣ ಹಾಸ್ಟೆಲ್ ಕಮಿಟಿಗಳು, ವಿದ್ಯಾರ್ಥಿ ನಾಯಕತ್ವ ಮಧ್ಯ ಪ್ರವೇಶಿಸಿ ಸಮಸ್ಯೆಗಳನ್ನು ಬಗೆಹರಿಸುತ್ತಿದ್ದವು. ಆದರೆ ಅಧ್ಯಾಪಕರೇ ತಮ್ಮ ಪ್ರಥಮ ಶತ್ರು ಎಂದು ಭಾವಿಸಿರುವ ಸದ್ಯದ ವಿದ್ಯಾರ್ಥಿ ನಾಯಕತ್ವ ಹಾಗೆ ಮಾಡಲು ಸಾಧ್ಯವಿರಲಿಲ್ಲ. ಪರಿಣಾಮವಾಗಿ ಕೇಂದ್ರ ಸರಕಾರದ ಕೈಗೊಂಬೆಯಾಗಿರುವ ಉಪ ಕುಲಪತಿ ವಿದ್ಯಾರ್ಥಿ ಸಂಘದ ಸಕ್ರಿಯ ಕಾರ್ಯಕರ್ತರ ವಿರುದ್ಧ ಸೇಡಿನ ಕ್ರಮ ಕೈಗೊಳ್ಳಲು ಅವಕಾಶ ಒದಗಿಸಿದಂತಾಯಿತು. ಪ್ರಧಾನ ಕಾರ್ಯದರ್ಶಿ ಹಾಗೂ ಅಧ್ಯಕ್ಷರನ್ನು ವಿಶ್ವ ವಿದ್ಯಾನಿಲಯದಿಂದ ಮೂರು ವರ್ಷಗಳ ಕಾಲ ಅಮಾನತುಗೊಳಿಸುವುದರೊಂದಿಗೆ ಉಪ ಕುಲಪತಿಗಳು ಅದನ್ನಾಗಲೇ ಆರಂಭಿಸಿಬಿಟ್ಟಿದ್ದಾರೆ. ಎಸ್. ಎಫ್. ಐ. ಇದನ್ನು ಖಂಡಿಸಿ ವಿಶ್ವ ವಿದ್ಯಾಲಯ ಜೀವನದ ಎಲ್ಲಾ ಕ್ಷೇತ್ರಗಳಲ್ಲಿ ವಿದ್ಯಾರ್ಥಿಗಳ ಸಾಧನೆಗಳನ್ನು ನಿಷ್ಫಲಗೊಳಿಸುವ ವಿಶ್ವ ವಿದ್ಯಾಲಯ ಆಡಳಿತದ ಯಾವುದೇ ಪ್ರಯತ್ನವನ್ನು ಒಗ್ಗಟ್ಟಿನಿಂದ ಎದು

(7ನೇ ಪುಟ ನೋಡಿ)

ದೆಹಲಿಯಲ್ಲಿ ಪುಟಾಣಿಗಳ ಮತ ಪ್ರದರ್ಶನ

"ದೆಹಲಿ ಆಡಳಿತಗಾರರೇ ನಮ್ಮ ಮೊರೆಗೆ ಕಿವಿಗೊಡಿ", "ಶಾಲೆಗಳಲ್ಲಿ ನಮಗೆ ಮಧ್ಯಾಹ್ನದ ಉಪಹಾರ ಕೊಡಿ", "ನಮಗೆ ಉಚಿತ ಪಠ್ಯಪುಸ್ತಕದ ಹಾಗೂ ಸಮವಸ್ತ್ರ ಬೇಕು", ನಮಗೆ "ನಮ್ಮ ಕಾಲನಿಗಳಲ್ಲಿ ಆಟೋಟಗಳ ಸೌಲಭ್ಯ ಬೇಕು" —ಪುಟಾಣಿ ಕಂಠಗಳಿಂದ ಹೊಮ್ಮುತ್ತಿದ್ದ ಈ ಘೋಷಣೆಗಳು ದೆಹಲಿಯ ಹಳೆಯ ಸಚಿವಾಲಯದೆಡೆಗೆ ಹೋಗುವ ಮುಖ್ಯ ರಸ್ತೆಯಲ್ಲಿ ಜೂನ್ 1 ರಂದು ಮೊಳಗಿದವು. ಅಂದು ಅಂತರ ರಾಷ್ಟ್ರೀಯ ಮಕ್ಕಳ ದಿನ. ಉತ್ತರ ಹಾಗೂ ಪೂರ್ವ ದೆಹಲಿಯಿಂದ, ಮಂಗಲ್‌ಪುರೀ, ನಂದನಗರೀ ಪುನರ್ವಸತಿ ಕಾಲನಿಗಳಿಂದ ಪುಟಾಣಿಗಳಿಂದ ಹಿಡಿದು ಹದಿಹರೆಯದ ವರೆಗೆ ಸುಮಾರು 700 ಮಕ್ಕಳು ಈ ಪ್ರದರ್ಶನದಲ್ಲಿ ಭಾಗವಹಿಸಿದ್ದರು. ಹೆಚ್ಚಿನವರು ಬರಿಗಾಲಲ್ಲಿ ಬಂದಿದ್ದರೂ ಸುಡು ಬಿಸಿಲನ್ನು ಲೆಕ್ಕಿಸದೆ ಘೋಷಣಾ ಫಲಕಗಳನ್ನು, ಬಾವುಟಗಳನ್ನು ಹಿಡಿದು ಮೆರವಣಿಗೆ ನಡೆಸಿದರು.

ಹಳೆಯ ಸಚಿವಾಲಯದಲ್ಲಿ ದೆಹಲಿಯ ಮುಖ್ಯ ಕಾರ್ಯಕಾರೀ ಕೌನ್ಸಿಲರನ್ನು ಘೆರಾಯಿಸಿ ಉಚ್ಛ ಕಂಠಗಳಿಂದ ತಮ್ಮ ಬೇಡಿಕೆ ಮಂಡಿಸಿದರು. ಮಧ್ಯಾಹ್ನದ ಉಪಹಾರಕ್ಕೆ ಆತ ಒಪ್ಪಬೇಕಾಯಿತು. ಇತರ ಬೇಡಿಕೆಗಳನ್ನೂ ಪರಿಶೀಲಿಸುವುದಾಗಿ ಆಶ್ವಾಸನೆ ನೀಡಬೇಕಾಯಿತು. ಜನವಾದಿ ಮಹಿಳಾ ಸಮಿತಿ ಹಾಗೂ ಡಿ. ವೈ. ಎಫ್. ಐ. ಈ ಮತಪ್ರದರ್ಶನವನ್ನು ಸಂಘಟಿಸಿದ್ದವು.

ಕರುಣಾಕರನ್ ಸರಕಾರ: ಈಡೇರದ ಭರವಸೆಗಳ ವರ್ಷ

ಮೇ 24ರಂದು ಅಧಿಕಾರದಲ್ಲಿ ಒಂದು ವರ್ಷವನ್ನು ಕಳೆದ ಕೇರಳದ ಕರುಣಾಕರನ್‌ರ ಸಮ್ಮಿಶ್ರ ಸರಕಾರದ ಮಟ್ಟಿಗೆ ಈ ಒಂದು ವರ್ಷ ವಚನ ಭಂಗದ ಸರಮಾಲೆಯನ್ನೇ ಹೆಣೆದ ವರ್ಷವಾಗಿತ್ತು. ಕೇರಳದ ಮಟ್ಟಿಗೆ ಅದು ವಿನಾಶಕಾರೀ ವರ್ಷವೂ ಆಗಿತ್ತು.

ಎಡ ಪ್ರಜಾ ಪ್ರಭುತ್ವ ರಂಗದ ಸರಕಾರದಲ್ಲಿ ಕಾನೂನು ವ್ಯವಸ್ಥೆ ಹದಗೆಟ್ಟಿದೆಯೆಂದು ಬೊಬ್ಬಿಡುತ್ತಿದ್ದ ಕಾಂಗ್ರೆಸ್ (ಐ) ನ ಸಮ್ಮಿಶ್ರ ಸರಕಾರದ ಈ ಒಂದು ವರ್ಷದ ಆಡಳಿತದಲ್ಲಿ ಪರಿಸ್ಥಿತಿ ಸಂಪೂರ್ಣ ಹತೋಟಿ ತಪ್ಪುತ್ತಿರುವಂತೆ ಕಾಣುತ್ತಿದೆ. ರಾಜಕೀಯ ಕೊಲೆಗಳು ಹೆಚ್ಚುತ್ತಿವೆ. ಆರ್. ಎಸ್. ಎಸ್. ಹಾಗೂ ಇತರ ಕೋಮು ಶಕ್ತಿಗಳಿಗೆ ಉತ್ತೇಜನ ದೊರಕಿದಂತಾಗಿ ಪ್ರಥಮ ಬಾರಿಗೆ ರಾಜ್ಯದ ಕೋಮು ಸೌಹಾರ್ದಕ್ಕೆ ಧಕ್ಕೆ ಬಂದೊದಗಿದೆ. ಕಳೆದ ವರ್ಷದಾಂತ್ಯದಲ್ಲಿ ತಿರುವನಂತಪುರದಲ್ಲಿ ನೀಲಕ್ಕಳನಲ್ಲಿನ ಘಟನೆಗಳು ಇದರ ಪ್ರತೀಕ. ಹರಿಜನ ಹಾಗೂ ಕೃಷಿ ಕಾರ್ಮಿಕರ ಮೇಲೆ ಹಲ್ಲೆಗಳು ಹೆಚ್ಚುತ್ತಿವೆ.

ಕೇಂದ್ರದಲ್ಲಿ ಹಾಗೂ ರಾಜ್ಯದಲ್ಲಿ ಒಂದೇ ಪಕ್ಷದ ಆಡಳಿತವಿದ್ದರೆ ರಾಜ್ಯಕ್ಕೆ ಹೆಚ್ಚು ನೆರವು ಸಿಗುತ್ತದೆಯೆಂದು ಹೇಳಿಕೊಂಡು ಅಧಿಕಾರಕ್ಕೆ ಬಂದ ಈ ಸಮ್ಮಿಶ್ರ ಸರಕಾರಕ್ಕೆ ನೆರವು ಹೆಚ್ಚಿಸಿಕೊಳ್ಳುವುದಿರಲಿ, ಸಿಗಬೇಕಾಗಿದ್ದ ನೆರವನ್ನೂ ಪೂರ್ಣವಾಗಿ ಪಡೆಯಲು ಸಾಧ್ಯವಾಗಿಲ್ಲ; ಸಾರ್ವಜನಿಕ ವಿತರಣಾ ವ್ಯವಸ್ಥೆಗೆ ಬೇಕಾದ ಅಕ್ಕಿಯ ಪ್ರಮಾಣದಲ್ಲಿ ಖೋತಾವನ್ನೂ ತಡೆಯಲಾಗಲಿಲ್ಲ; ಹಣದ ಬೆಳೆಗಳ ಬೆಳೆಗಾರರನ್ನು ನಾಶಗೊಳಿಸುತ್ತಿರುವ ಕೇಂದ್ರ ಸರಕಾರದ ಆಮದು ನೀತಿಯನ್ನು ಬದಲಿಸಲೂ ಈ ಸರ್ಕಾರಕ್ಕಾಗಲಿಲ್ಲ. ಈ ಸಮ್ಮಿಶ್ರ ಸರಕಾರದ ಅಂಗ ಪಕ್ಷಗಳೇ ಕೇಂದ್ರದ ಧೋರಣೆಗಳಿಗೆ ಬಹಿರಂಗ ವಿರೋಧ ಪಡಿಸುತ್ತಿವೆಯೆಂದರೆ ಈ ರಂಗದಲ್ಲಿ ಕರುಣಾಕರನ್ ಸರಕಾರದ ಶೋಚನೀಯ ವೈಫಲ್ಯವೆಷ್ಟು ಎಂಬುದು ತಿಳಿಯುತ್ತದೆ.

ಅದೇ ರೀತಿ ಪ್ರತಿ ತಾಲ್ಲೂಕಿನಲ್ಲಿ ಕೈಗಾರಿಕೆ ಸ್ಥಾಪಿಸುವ, ಆ ಬಗ್ಗೆ ವ್ಯಾಪಕ ಸರ್ವೆ ನಡೆಸುವ, ವೈನಾಡ್ ಹಾಗೂ ಇಡುಕ್ಕಿ ಜಿಲ್ಲೆಗಳಿಗೆ ಜಿಲ್ಲಾ ಅಭಿವೃದ್ಧಿ ಪ್ರಾಧಿಕಾರ ರಚಿಸುವ, ಬರ, ನೆರೆಯಿಂದಾಗಿ ಬೆಳೆನಾಶವಾದರೆ ರೈತರಿಗೆ ನೆರವು ಒದಗಿಸುವ ಭರವಸೆಗಳೆಲ್ಲಾ ಹುಸಿಯಾಗಿವೆ. ನಿರುದ್ಯೋಗ ಭತ್ಯೆ ನಿಲ್ಲಿಸಿ ಅದರ ಬದಲು ಸ್ವಉದ್ಯೋಗ ಯೋಜನೆ ಭರವಸೆ ನೀಡಲಾಗಿತ್ತು. ಈಗ ಒಂದು ವರ್ಷ ಕಳೆದರೂ ಈ ಯೋಜನೆಯ ಸುದ್ದಿಯೇ ಇಲ್ಲ. ಅತ್ತ ನಿರುದ್ಯೋಗ ಭತ್ಯೆಯನ್ನು ನಿಲ್ಲಿಸಲಾಯಿತು.

ಆಡಳಿತದಲ್ಲಿ ಭ್ರಷ್ಟಾಚಾರಗಳು ವ್ಯಾಪಕವಾಗಿ ಹರಡಿರುವುದರ ಬಗ್ಗೆ ಪತ್ರಿಕೆಗಳಲ್ಲಿ ಆಗಾಗ ವರದಿಗಳು ಬರುತ್ತಿವೆ. 75 ಜನರ ದುರ್ಮರಣಕ್ಕೆ ಹಾಗೂ ಇತರ ಹಲವರಲ್ಲಿ ಅಂಗವಿಕಲತೆಯುಂಟು ಮಾಡಿದ ಮೆಥೀನ್ ಮದ್ಯ ದುರಂತ ಅಬಕಾರಿ ಇಲಾಖೆಯಲ್ಲಿರುವ ಭ್ರಷ್ಟಾಚಾರದ ಅಗಾಧತೆಗೆ ಒಂದು ಉದಾಹರಣೆ.

ಕರ್ನಾಟಕ ರಾಜ್ಯದಲ್ಲಿ:

ಬೆಂಗಳೂರು ವಿಶ್ವವಿದ್ಯಾಲಯ ಹಗರಣ

ವಿದ್ಯುತ್ ಮಂಡಳಿಯಲ್ಲಿ "ಕತ್ತಲಿನ" ವ್ಯವಹಾರ ಬೆಳಕು ಕಾಣುವ ಮುಂಚೆಯೇ ಬೆಂಗಳೂರು ನಗರದ ವಿಶ್ವವಿದ್ಯಾಲಯದಲ್ಲಿ ನಡೆದಿದೆ ಯೆಂದು ಹೇಳಲಾದ ಉತ್ತರ ಪತ್ರಿಕೆಗಳ ಹಗರಣದ ಪ್ರಥಮ ಹಂತದ ಚೌಕಾಶಿ ಮುಗಿದಿದ್ದು, ಅದರಲ್ಲಿ ಪರೀಕ್ಷೆ ನಿಯಂತ್ರಣಾಧಿಕಾರಿಗಳು ಮತ್ತು ಇನ್ನಿತರ ಹಲವಾರು ಅಧಿಕಾರಿಗಳ ಕೈವಾಡವಿದೆಯೆಂದು ಖಾತ್ರಿಯಾಗಿರುವುದರಿಂದ ಈ ಅಧಿಕಾರಿಗಳ ಮೇಲೆ ಯೋಗ್ಯ ಕ್ರಮ ಕೈಗೊಳ್ಳುವುದಕ್ಕಾಗಿ ಜಾಗೃತ ಆಯೋಗವನ್ನು ಕೇಳಿಕೊಳ್ಳಲಾಗುವುದೆಂದು ತಿಳಿದು ಬರುತ್ತದೆ.

ಈ ಸಮಾಜದಲ್ಲಿ ಮನುಷ್ಯ ತನ್ನ ತೃಷೆಯನ್ನು ತೃಪ್ತಿಪಡಿಸುವ ಸಲುವಾಗಿ, ಚಟಗಳನ್ನು ಪೂರೈಸಿಕೊಳ್ಳುವ ಸಲುವಾಗಿ ನೀತಿ, ನಿಯಮಗಳನೆಲ್ಲಾ ಗಾಳಿಗೆ ತೂರಿ, ಹೆಣ್ಣು, ಹೊನ್ನು, ಅಧಿಕಾರಿಗಳಿಗೆ ಬಲಿಬಿದ್ದು ವಿದ್ಯಾಕ್ಷೇತ್ರವನ್ನು ಕೂಡ ಕಲುಷಿತಗೊಳಿಸುತ್ತಿದ್ದಾನೆ. ಕೊಳೆತು ನಾರುತ್ತಿರುವ ಇಂದಿನ ಸಮಾಜದಲ್ಲಿ ಜ್ಞಾನ ಪೀಠಗಳನ್ನು ರಕ್ಷಿಸುವುದೂ ಅಸಾಧ್ಯವಾಗಿದೆ.

"ಅಕ್ರಮ ವ್ಯವಹಾರಗಳಲ್ಲಿ ತೊಡಗಿರುವವರು ಶಿಕ್ಷಣ ಸಂಸ್ಥೆಗಳಲ್ಲಿರಲು ಅನರ್ಹರು" ಎಂದು ಶಿಕ್ಷಣ ಸಚಿವರಾದ ಬಿ. ರಾಚಯ್ಯನವರು ಹೇಳಿದ್ದಾರೆ. ಇತರ ಖಾತೆಗಳ ಮಂತ್ರಿವರ್ಯರೂ ಕೂಡ ರಾಚಯ್ಯನವರ ಹಾಡನ್ನೇ ಹಾಡುತ್ತಿದ್ದಾರೆ. ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ, ಕೈಗಾರಿಕಾ ಮಂತ್ರಿ ಬೊಮ್ಮಾಯಿ ಅವರೂ ಭದ್ರಾವತಿ ಉಕ್ಕಿನ ಕಾರ್ಖಾನೆಯಂಥವುಗಳ ಕೆಲಸ ಅಸಮರ್ಪಕವಾಗಿದೆಯೆಂದು ಆರೋಪಿಸಿದ್ದಾರೆ. ಕಾರ್ಮಿಕ ಇಲಾಖೆ ಅತ್ಯಂತ ಕೀಳ್ಮಟ್ಟದಲ್ಲಿದೆಯೆಂದು ಹೇಳಿದ್ದಾರೆ. ಎಲ್ಲಿಯೂ ಆಡಳಿತ ಸರಿಯಿಲ್ಲವೆಂದು ಇದರರ್ಥ.

ಮಕ್ಕಳನ್ನು ಮೂರನೇ ವಯಸ್ಸಿನಲ್ಲಿ ಶಿಶುವಿಹಾರಕ್ಕೆ ಸೇರಿಸುವಲ್ಲಿಂದ ಹಿಡಿದು ವಿಶ್ವವಿದ್ಯಾಲಯಗಳಲ್ಲಿ ಉಚ್ಚಮಟ್ಟದ ಪದವಿ ಪಡೆಯುವ ವರೆಗೂ ಮಕ್ಕಳೂ, ಪಾಲಕರೂ ಸಮಸ್ಯೆಗಳ ಸರಪಳಿ ಹಿಡಿದುಕೊಂಡು ಮೈತುಂಬ ರಕ್ತ ಚಿಮ್ಮಿಸಿಕೊಳ್ಳಬೇಕಾಗುತ್ತದೆ. ಶಿಶುವಿಹಾರ ಪ್ರವೇಶದಲ್ಲಿ ಡೊನೇಷನ್ ಭೂತವನ್ನೆದುರಿಸಬೇಕು. ತಪ್ಪು ತಪ್ಪಾದ ಪಠ್ಯ ಪುಸ್ತಕಗಳು, ಅದೂ ವೇಳೆಗೆ ಲಭ್ಯವಾಗದಿರುವುದು, ಮನಸ್ಸಿಲ್ಲದ ಮನಸ್ಸಿನಿಂದ ಕಲಿಸುವ ಶಿಕ್ಷಕ ವೃಂದ, ಕಲಿಯದೇ ಕಲಿಗಳಾಗಬೇಕು. ಪದವೀಧರರಾಗಬೇಕೆಂಬ ಹಂಬಲದಿಂದ ಪವಿತ್ರ ಶಿಕ್ಷಣ ಕ್ಷೇತ್ರವನ್ನು ಕಲುಷಿತಗೊಳಿಸುತ್ತಿರುವ ವಿದ್ಯಾರ್ಥಿಗಳ ಗುಂಪು, ಅವರಿಗೆ ಪ್ರೋತ್ಸಾಹ ನೀಡುತ್ತಿರುವ, ಸಹಾಯ ಮಾಡುತ್ತಿರುವ ಶಿಕ್ಷಕರೂ, ಅಧಿಕಾರಿ ವರ್ಗ ಹೀಗೆ ಪ್ರತಿಯೊಂದು ಹಂತದಲ್ಲೂ ಆತಂಕಗಳೇ.

ಇಸವಿ ಬದಲಾಯಿಸಿ ಹಿಂದಿನ ವರ್ಷದ ಪ್ರಶ್ನೆಪತ್ರಿಕೆಗಳನ್ನೇ ಹಂಚುವುದು, ಪರೀಕ್ಷಾಕೋಣೆಯಿಂದ ಹೊರ ಹೋಗಿ ಉತ್ತರ ಬರೆದು ತರುವುದು, ಉತ್ತರ ಪತ್ರಿಕೆಗಳನ್ನು ಮನೆಗಳಲ್ಲಿ ತಿದ್ದಿಸುವುದು ಇಂತಹ ಹಲವಾರು ಪ್ರಕರಣಗಳು ದೇಶದ ನಾನಾ ವಿದ್ಯಾಲಯಗಳಿಂದ ಕೇಳಿಬರುತ್ತಲೇ ಇವೆ. ಪೋಲೀಸರ ಕಾವಲಿನಿಂದಾಗಲೀ, ಸುಗ್ರೀವಾಜ್ಞೆಗಳಿಂದಾಗಲೀ, ಕಾಪಿ ಮಾಡುವ ಚಟವನ್ನು ತಪ್ಪಿಸಲಾಗಿಲ್ಲ. ಇಂಥ ಅಪ್ರಾಮಾಣಿಕ ಪದ್ಧತಿಯಿಂದ ಬೋಗಸ್ ಅರ್ಹತೆ ಗಿಟ್ಟಿಸಿಕೊಳ್ಳುವವರಿಂದ ಸಮಾಜ ತುಂಬಿದೆ. ನಿಜವಾಗಿಯೂ ಬುದ್ಧಿವಂತ ಮಕ್ಕಳಿಗೆ ಅವಕಾಶವಿಲ್ಲದೆ ಈಗಿನ ಪರೀಕ್ಷಾ ಪದ್ಧತಿಯಿಂದಾಗಿ ಅಂಥವರು ಅಪಾರ ಕಷ್ಟಕ್ಕೀಡಾಗಿದ್ದಾರೆ. ಅವಕಾಶಗಳನ್ನು ಕಳೆದುಕೊಳ್ಳುತ್ತಿದ್ದಾರೆ.

ಶಿಕ್ಷಣ ಪದ್ಧತಿಯಲ್ಲಿ ಅಮೂಲಾಗ್ರ ಬದಲಾವಣೆ ಆಗಬೇಕೆಂದು ಹೇಳುವವರಿಗೂ, ಬದಲಾವಣೆ ಮಾಡಿಯೇ ತೀರುತ್ತೇವೆಂದು ಸಾರುವವರಿಗೂ ನಮ್ಮಲ್ಲಿ ಕೊರತಾ ಇಲ್ಲವೇ ಇಲ್ಲ. ಆದರೆ ಕಳೆದ 35 ವರ್ಷಗಳಲ್ಲಿ ಮಾತ್ರ ಒಂದಂಗುಲ ಕೂಡ ಮುಂದೆ ಸಾಗಲಿಕ್ಕಾಗಲಿಲ್ಲ. ಹನ್ನೆರಡಂಗುಲದಷ್ಟು ಹಿಂದೆಟು ಹಾಕಿದ್ದೇವೆ. ಒಂದು ಬೆಂಗಳೂರು ವಿಶ್ವವಿದ್ಯಾಲಯವಲ್ಲ. ಇಡೀ ದೇಶದ ಶಿಕ್ಷಣ ಪರೀಕ್ಷಾ ಪದ್ಧತಿಗಳಲ್ಲಿ ಅಮೂಲಾಗ್ರ ಬದಲಾವಣೆಯಾಗುವುದಗತ್ಯ. ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಾರ್ಟಿಯ ಮುಖಂಡತ್ವದ ಪಶ್ಚಿಮಬಂಗಾಲದ ಎಡರಂಗ ಸರಕಾರ ಈ ದಿಸೆಯಲ್ಲಿ ಪ್ರಥಮ ಹೆಜ್ಜೆ ಇಟ್ಟಿದೆ. ಕರ್ನಾಟಕದ ಜನತಾ ಸರಕಾರವೂ ಪ. ಬಂಗಾಲದ ಮಾದರಿಯನ್ನನುಸರಿಸಲಿ.

ಬೆಳಕಿನ ವ್ಯವಹಾರ ಕತ್ತಲಲ್ಲಿ

ಕಾಂಗ್ರೆಸ್ ಆಡಳಿತೆಯಲ್ಲಿ ವ್ಯವಹಾರಗಳೆಲ್ಲ "ಕತ್ತಲೆ"ಯಲ್ಲೇ ನಡೆಯುತ್ತವೆ. ಆ ಕಾರಣದಿಂದಲೇ ಯೋಜನೆಗಳೆಲ್ಲ ಕುಸಿದು ಬೀಳುತ್ತ ಬಂದಿವೆ. ದೇಶಕ್ಕೂ ಜನತೆಗೂ ಅಪಾರ ಹಾನಿಯಾಗುತ್ತಿದೆ.

ಜನತಾ ಸರಕಾರ ಅಧಿಕಾರಕ್ಕೆ ಬಂದ ನಂತರ ಸರಕಾರ ಕಾರ್ಪೋರೇಶನ್‌ಗಳಲ್ಲಿಯ ವ್ಯವಹಾರ ಪದ್ಧತಿಯಲ್ಲಿ ಬದಲಾವಣೆಯಾಗಬೇಕಾಗಿತ್ತು. ಬದಲಾವಣೆಯಾಗುತ್ತದೆಂಬ ಅಪೇಕ್ಷೆಯನ್ನು ಸಾರ್ವಜನಿಕರು ಹೊಂದಿದ್ದರು. ಆದರೆ ಬಂಡವಾಳಶಾಹಿ ಪಥದಲ್ಲೇ ಮುಂದುವರಿಯುವ ಆಡಳಿತೆಯಲ್ಲಿ ಕ್ರಾಂತಿಕಾರಿ ಬದಲಾವಣೆಯನ್ನು ಅಪೇಕ್ಷಿಸುವುದು ಸರಿಯಲ್ಲ. ಹಾಗಾಗಬೇಕಾದರೆ ಸಮಗ್ರ ಕ್ರಾಂತಿಯಾಗಿ ಕಾರ್ಮಿಕ ವರ್ಗದ ಪಕ್ಷ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ನೇತೃತ್ವದ ಅಧಿಕಾರ ಸ್ಥಾಪನೆಯಾಗಬೇಕು. ಅಲ್ಲಿಯ ತನಕ ಜನರ ಪ್ರಕ್ಷೋಭೆ ನಡೆದು ಆಡಳಿತಾತ್ಮಕ ಸುಧಾರಣೆಗಾಗಿ ಹೋರಾಟ ನಡೆಯಬೇಕು.

ಸ್ವಲ್ಪ ಬಿರುಸಾದ ಗಾಳಿ-ಮಳೆಯಾದರೆ ರಾಜ್ಯದ ಹಲವಾರು ಪ್ರದೇಶಗಳಲ್ಲಿ ವಿದ್ಯುತ್ ಕಂಬಗಳು ನೂರಾರು-ಸಾವಿರಾರು ರಸ್ತೆಯ ಮೇಲೆ ಬೀಳುವ ದೃಶ್ಯ ಕಾಣುತ್ತದೆ. ಈ ವರ್ಷ ಮೊದಲನೇ ಗಾಳಿ-ಮಳೆಯಲ್ಲಿ ಬೆಂಗಳೂರು, ಬಿಜಾಪುರ ಪ್ರದೇಶಗಳಲ್ಲಿ ಇಂಥ ಗಂಡಾಂತರಕಾರಿ ಘಟನೆ ನಡೆದು ವಿದ್ಯುತ್ ಮಂಡಲಿಯ ಕಾರ್ಯದ ವೈಖರಿಗೆ ಸವಾಲನ್ನೊಡ್ಡಿದೆ.

ಸ್ವಲ್ಪ ಬಿರುಸಾಗಿ ಬೀಸುವ ಗಾಳಿ ವಿದ್ಯುತ್ ಕಂಬಗಳನ್ನೆ ನೆಲಕ್ಕೆ ಅಪ್ಪಳಿಸುವುದಾದರೆ "ಕತ್ತಲೆಯ ಕೈ" ವಿದ್ಯುತ್ ಮಂಡಲಿಯ ಆಡಳಿತೆಯಲ್ಲಿ ಎಷ್ಟು ಭದ್ರವಾಗಿ, ಆಳವಾಗಿ ಒಳಗೆ ಸೇರಿಕೊಂಡಿದೆಯೆಂಬುದು ಸ್ಪಷ್ಟ. ಈ ರೀತಿ ಕಂಬಗಳು ಬೀಳುವುದರಿಂದ ವಿದ್ಯುತ್ ಮಂಡಲಿಗಷ್ಟೇ ಹಾನಿ ತಟ್ಟುವುದಲ್ಲದೆ, ಹಗಲಿನಲ್ಲಿ ಬಿದ್ದರೆ ಜನರು, ಮಕ್ಕಳೆಲ್ಲ ಮರಣವನ್ನಪ್ಪುವ ದುರಂತ ದೃಶ್ಯಗಳು ಕಾಣಸಿಗುತ್ತವೆ.

ವಿದ್ಯುತ್ ಮಂಡಲಿಗೆ ಪ್ರತಿವರ್ಷ ಎರಡು ಲಕ್ಷ ಸಿಮೆಂಟ್ ಕಂಬಗಳು ಬೇಕಾಗುತ್ತದೆ. ಕಳೆದ ವರ್ಷ ಒಂದು ಲಕ್ಷ, ಎಪ್ಪತ್ತು ಸಾವಿರ ಕಂಬಗಳನ್ನು ಪಡೆದಿತ್ತು. ಒಂದು ಕಂಬಕ್ಕೆ ರೂ. 250ರಂತೆ ರೂ. 45 ಕೋಟಿಯ ವ್ಯವಹಾರ ನಡೆಸಿತ್ತು. ಈ ವರ್ಷ ಆರು ಲಕ್ಷ ಸಿಮೆಂಟ್ ಕಂಬಗಳು ವಿದ್ಯುತ್ ಮಂಡಲಿಗೆ ಬೇಕಾಗಬಹುದು ಇಷ್ಟು ಬೆಲೆಬಾಳುವ ಕಳಪೆ ಕಂಬಗಳನ್ನು ತಯಾರಿಸಲು ಕೆಲವು ಕಂಟ್ರಾಕ್ಟರಿಗೆ ಹಂಚಿಕೊಡುವುದರಲ್ಲಿ "ಕಾಣದ ಕೈಯ" ಆಟ ನಡೆಯುತ್ತದೆ. ಅದನ್ನು ತರಿಸಿ ಬಿಲ್ಲುಕೊಡುವುದರಲ್ಲೂ ಅದೇ ಆಟ. ಅಂಥ ಅಯೋಗ್ಯ ಕಂಬಗಳನ್ನು ನಗರಗಳಲ್ಲೂ, ಹಳ್ಳಿಗಳಲ್ಲೂ ನೆಡುವುದರಲ್ಲೂ ಅದೇ ಕೈಯ ಆಟಗಳು ನಡೆಯುತ್ತವೆ. ಸಾಕಷ್ಟು ತೆಗ್ಗು ತೆಗೆದು, ಸಿಮೆಂಟ್ ಕಾಂಕ್ರೀಟಿನಿಂದ ಕಂಬಗಳನ್ನು ಸರಿಯಾಗಿ ನೆಡದಿರುವುದರಿಂದಲೇ ತುಸು ಗಾಳಿ ಬೀಸಿದ ಕೂಡಲೇ ಕಂಬಗಳು ಬಣ್ಣ ಎಲೆಗಳು ಉದುರುವಂತೆ ಬಿದ್ದುಬಿಡುತ್ತವೆ. ಇಂಥ ಕಾಣದ ಕೈಯನ್ನು ಕತ್ತರಿಸಿ ಹಾಕಬೇಕು. ಕತ್ತಲ ವ್ಯವಹಾರವನ್ನು ನಿಲ್ಲಿಸಬೇಕು. ಇದು ಜನ ದೊಡ್ಡದಾದ ಕೆಲಸವೇ ಸರಿ. ಜನರನ್ನು ದೊಡ್ಡದಾಗಿ ಸೇರಿಸಿ, ದೊಡ್ಡ ದೊಣ್ಣೆ ತಿರುಗಿಸಿದರೆ ಮಾತ್ರ ಸ್ವಲ್ಪ ಪರಿಣಾಮವಾಗಬಹುದು. ಬೆಕ್ಕಿಗೆ ಗಂಟೆ ಕಟ್ಟಬೇಕು. ಆ ಕೆಲಸಕ್ಕೆ ನಾವೆಲ್ಲ ಮುಂದಾಗೋಣ.

ಜನತಾ ಸರ್ಕಾರದ ಕಾರ್ಮಿಕ ನೀತಿ

ಕಾರ್ಮಿಕರ ಸಮಸ್ಯೆಗಳನ್ನು ಪರಿಹರಿಸುವುದರಲ್ಲಿ ಜನತಾ ಸರಕಾರ ತನ್ನ ಅಸಮರ್ಪಕತೆಯನ್ನು ತೋರ್ಪಡಿಸುತ್ತಿದೆ. ಕೇಂದ್ರ ಸರಕಾರದ ವ್ಯಾಪ್ತಿಯೊಳಗೆ ಯಾವುದೇ ಸಮಸ್ಯೆ ಉದ್ಭವವಾದರೆ ರಾಜ್ಯ ಸರಕಾರ ತನ್ನ ಅಸಹಾಯಕತೆಯನ್ನು ಪ್ರದರ್ಶಿಸಬಹುದು. ಆದರೆ ರಾಜ್ಯ ಆಡಳಿತೆಗೆ ಸಂಬಂಧಪಟ್ಟಂಥ ಸಮಸ್ಯೆಗಳು ಹುಟ್ಟಿಕೊಂಡಾಗ ಅವುಗಳನ್ನು ಪರಿಹರಿಸಲು ತನ್ನ ಎಲ್ಲ ಶಕ್ತಿ ಉಪಯೋಗಿಸುವ ಜವಾಬ್ದಾರಿ ರಾಜ್ಯ ಸರಕಾರದ್ದಾಗಿರುತ್ತದೆ. ತನ್ನಲ್ಲಿರುವ ಅಂಥ ಅಧಿಕಾರವನ್ನು ರಾಜ್ಯ ಸರಕಾರ ಸಮರ್ಥನೀಯವಾಗಿ ಉಪಯೋಗಿಸುತ್ತಿಲ್ಲೆಂಬ ಆರೋಪ ಹೊರಿಸಬೇಕಾಗುತ್ತದೆ. ಸರಕಾರದ ಅಂಥ ನೀತಿಯ ವಿರುದ್ಧ ವಿಶಾಲ ತಳಹದಿಯ ಸಂಯುಕ್ತ ಹೋರಾಟ ನಡೆಸಲೇಬೇಕು.

ಬೆಂಗಳೂರು ನಗರದಲ್ಲಿರುವ ಆಂಧ್ರ ಅಂಡ್ ಸದರನ್ ಸ್ಟೀಲ್ ಕಂಪೆನಿಯ ಸಾಧಾರಣ 500 ಕೆಲಸಗಾರರು ಕಳೆದ ಒಂದು ವರ್ಷಕ್ಕೂ ಮೇಲ್ಪಟ್ಟು ನ್ಯಾಯಯುತ ಬೇಡಿಕೆಗಳಿಗೋಸ್ಕರ ಹೋರಾಟ ನಡೆಸುತ್ತಿದ್ದಾರೆ. ಸಿ.ಐ.ಟಿ.ಯು. ನೇತೃತ್ವದ ಕಾರ್ಮಿಕ ಸಂಘಟನೆಯನ್ನು ಮುರಿಯುವ ಏಕೈಕ

(8ನೇ ಪುಟ ನೋಡಿ)

೮೦ ಲಕ್ಷ ಭೂಹೀನ ಕನ್ನಡಿಗರು

"ಕರ್ನಾಟಕದಲ್ಲಿ 80 ಲಕ್ಷ ಭೂಹೀನರಾಗಿ ಕನ್ನಡಿಗರಿದ್ದಾರೆ. ಕರ್ನಾಟಕದಲ್ಲಿ 4,50,000 ಎಕರೆ ಹೆಚ್ಚುವರಿ ಭೂಮಿ ಇದೆ." ಎಂದು ಹೇಳಿದವರು ಸಾರಿಗೆ ಸಚಿವ ಎಂ. ಪಿ. ಪ್ರಕಾಶ.

ಹೆಚ್ಚುವರಿ ಭೂಮಿಯನ್ನು ಕೃಷಿ ಕಾರ್ಮಿಕರಿಗೂ, ಬಡರೈತರಿಗೂ ಹಂಚಬೇಕೆಂದು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಾರ್ಟಿ ಮತ್ತು ರೈತ ಸಂಘ ಹಲವಾರು ವರ್ಷಗಳಿಂದ ಹೋರಾಡುತ್ತಿದೆ. ಇಂದಿರಾಗಾಂಧಿಯ 20 ಅಂಶ ಕಾರ್ಯಕ್ರಮ ಭೂಮಿ ಹಂಚಿಕೆಯನ್ನೊಳಗೊಂಡಿದ್ದರೂ ಕಾಂಗ್ರೆಸ್ ಆಳುವ ಯಾವ ರಾಜ್ಯದಲ್ಲೂ ಭೂ ಹಂಚಿಕೆಯ ಕಾರ್ಯ ಯಶಸ್ವಿಯಾಗಿ ಎಲ್ಲಿಯೂ ನಡೆದಿಲ್ಲ. ಬಲಿಷ್ಠವಾದ ರೈತರ ಕೃಷಿ ಕಾರ್ಮಿಕ ಸಂಘಟನೆಗಳಿದ್ದಲ್ಲಿ ಒತ್ತಾಯದಿಂದ ಭೂಮಿ ಆಕ್ರಮಣ ಚಳುವಳಿ ನಡೆಸಿ ಹೆಚ್ಚುವರಿ ಭೂಮಿ ವಶಪಡಿಸಿಕೊಳ್ಳಬೇಕಾಯಿತು. ಕೇರಳ, ಬಿಹಾರ್ ಕರ್ನಾಟಕಗಳಲ್ಲಿ (ಕೋಲಾರ, ಬಿಜಾಪುರ) ಹೋರಾಟ ನಡೆಸಿ ಭೂಮಿ ಆಕ್ರಮಣ ಮಾಡಬೇಕಾಯಿತು. ಸರ್ಕಾರದ ವೈಫಲ್ಯದಿಂದಾಗಿ ಹೆಚ್ಚುವರಿ ಭೂಮಿ ಹಂಚಲ್ಪಡದಿದ್ದಾಗ ರೈತರು ಹೋರಾಟ ಮಾಡಿ ವಶಪಡಿಸಿಕೊಂಡಿರುವ ಭೂಮಿ ಎಂ. ಪಿ. ಪ್ರಕಾಶ ಅವರ ಜನತಾ ಸರ್ಕಾರ ಪಟ್ಟಕೊಟ್ಟು ಇನ್ನೂ ಸರಿಪಡಿಸಿಲ್ಲ.

ನಮ್ಮ ಅಂದಾಜು ಪ್ರಕಾರ ನಾಲ್ಕೂವರೆ ಲಕ್ಷ ಎಕರೆ ಹೆಚ್ಚುವರಿ ಭೂಮಿಯಲ್ಲಿ ಅದಕ್ಕಿಂತಲೂ ಹೆಚ್ಚು ಭೂಮಿ ಬಡರೈತರಿಗೆ ಹಂಚುವುದರ ಸಲುವಾಗಿ ಒದಗಿಸಲು ಶಕ್ಯವಿದೆ. ಭೂಮಿತಿ ಕಾಯಿದೆಯನ್ನು ಕಟ್ಟುನಿಟ್ಟಾಗಿ ಆಚರಣೆಯಲ್ಲಿ ತರುವುದು ಅತ್ಯಗತ್ಯ. ಆದರೆ ಆ ರೀತಿಯ ಕ್ರಮಕ್ಕೆಗೊಳ್ಳಲು ಜನತಾ ಸರ್ಕಾರಕ್ಕೆ ಧೈರ್ಯವಿದೆಯೇ ಎಂಬ ಪ್ರಶ್ನೆ.

"ಅಧಿಕಾರಿಗಳಿಂದ ಬಡಜನರ ಶೋಷಣೆ ತಪ್ಪಬೇಕಾದರೆ ಜನರು ಪ್ರತಿಭಟನಾ ಚಳುವಳಿ ನಡೆಸಬೇಕೆಂದು ಅಧಿಕಾರಿಗಳಿಂದ ಗ್ರಾಮಾಂತರ ಬಡಜನರ ಕೆಲಸವಾಗಬೇಕಾದರೆ ಚಳುವಳಿಯೊಂದೇ ಮಾರ್ಗ" ಎಂದೂ ಇದೇ ಮಂತ್ರಿಯವರು ಜನತೆಗೆ ಹೋರಾಟದ ಪಾಠ ಕಲಿಸಲು ಹೊರಟಿದ್ದಾರೆ. ಇದನ್ನು ನಾವು ಸ್ವಾಗತಿಸುತ್ತೇವೆ. ಹೋರಾಟಗಳಿಂದ ಜನರಲ್ಲಿ ಜಾಗೃತಿ ಉಂಟಾಗುತ್ತದೆ. ತಾವು ಯಾವ ಉದ್ದೇಶದ ಸಲುವಾಗಿ ಹೋರಾಡುತ್ತೇವೆಂಬುದರ ಕಲ್ಪನೆ ಅವರಲ್ಲುಂಟಾಗುತ್ತದೆ. ಈ ರೀತಿ ಗಳಿಸಿದ ಹೊಸ ಅರಿವುಸಮಾಜದಲ್ಲಿ ವಿನೂತನ ಬದಲಾವಣೆಯನ್ನುಂಟು ಮಾಡಲು ಸಹಾಯವಾಗುತ್ತದೆ, ಆದರೆ ಜನತಾ ಪಾರ್ಟಿಯಲ್ಲಿ ಬೆಳೆದು ಬಂದಿರುವ ಬಂಡವಾಳಶಾಹಿ ವರ್ಗದ ಗುಣಗಳು ಜನತೆಯ, ಕಾರ್ಮಿಕರ ಚಳುವಳಿಗಳನ್ನು ಸರಿಯಾದ ರೀತಿಯಲ್ಲಿ ಸ್ವಾಗತಿಸುತ್ತಿಲ್ಲೆಂಬ ಸಂಗತಿ ಈಗಾಗಲೇ ಬಹಿರಂಗವಾಗಿದೆ. ಬೆಂಗಳೂರು, ದಾಂಡೇಲಿ, ಹುಬ್ಬಳ್ಳಿಗಳಲ್ಲಿ ನಡೆಯುತ್ತಿರುವ ಕಾರ್ಮಿಕರ ಚಳುವಳಿ ಕುರಿತು ಜನತಾ ಸರಕಾರದ ನೀತಿ ಅಪಾಯಕಾರಿಯಾಗಿದೆಂಬುದು ಸ್ಪಷ್ಟ. ಆದ್ದರಿಂದ ಈಗ ಮಂತ್ರಿ ಪ್ರಕಾಶ ಅವರೇ ಹೋರಾಟದ ಕರೆ ಕೊಟ್ಟಿರುವುದರಿಂದ, ಕಾರ್ಮಿಕರ ಹೋರಾಟಗಳಲ್ಲಿ ಮಧ್ಯ ಪ್ರವೇಶಿಸಲು ಹಿಂಜರಿಯುತ್ತಿರುವ ಮುಖ್ಯಮಂತ್ರಿ, ಕಾರ್ಮಿಕ ಮಂತ್ರಿಗಳಿಗೂ ತಮ್ಮ ಪಾಠ ಕಲಿಸಿ, ಆ ಪಾಠದ ಫಲವಾಗಿ ಕಾರ್ಮಿಕ ಮಂತ್ರಿಗಳು ಮಾಲೀಕರ ಕಿವಿ ಹಿಂಡಿ, ಕಾರ್ಮಿಕರಿಗೆ ನ್ಯಾಯಕೊಡಿಸುವಂತೆ ಮಾಡಿದರೆ ಕರ್ನಾಟಕದ ಜನತಾ ಮಂತ್ರಿಗಳೊಬ್ಬರು ಹೊಸ ಅಧ್ಯಾಯ ಪ್ರಾರಂಭಿಸಿದಂತಾಗುತ್ತದೆ. ಅಂಥ ಅಧ್ಯಾಯ ಬರೆಯಲು ಮಂತ್ರಿ ಪ್ರಕಾಶ ಅವರು ಮುಂದಾಗುತ್ತಾರೆಯೇ ನೋಡೋಣ.

ಪಶ್ಚಿಮ ಬಂಗಾಲದಲ್ಲಿ

ಬಿಪ್ಲಬ್‌ದಾಸ್‌ಗುಪ್ತಾ

1978ರವರೆಗೆ ನಿಷ್ಕ್ರಿಯವಾಗಿದ್ದ ಒಂದು ಸಂಸ್ಥೆಗೆ ಎಡರಂಗವು ಮುಖಂಡತ್ವ ನೀಡಿ ಕಳೆದ ಐದು ವರ್ಷಗಳಲ್ಲಿ ಪುನಶ್ಚೇತನಗೊಳಿಸಿದೆ. ಗ್ರಾಮಾಂತರ ಪ್ರದೇಶದ ಜನಜೀವನದಲ್ಲಿ ಪಂಚಾಯತ್ ರಾಜ್ಯವು ಅನಿವಾರ್ಯವಾಗಿದೆ,

ಆದರೆ ಪಂಚಾಯತ್ ರಾಜ್ಯದ ಆಡಳಿತ ಸರಳವಾಗಿ ಮುಂದುವರಿದಿದೆಯೆಂದು ತಿಳಿಯುವುದು ಸರಿಯಲ್ಲ. ಸಿರಿವಂತರ ಮುಖಂಡತ್ವದಲ್ಲಿರುವ ಗ್ರಾಮಾಂತರದ ಆರ್ಥಿಕ-ಸಾಮಾಜಿಕ ನೆಲೆಗಟ್ಟಿಗೆ ವಿರುದ್ಧವಾಗಿ ಹೊಸ ದಾರಿ ತಯಾರಿಸುವ ಮತ್ತು ಬರೇ ತನ್ನ ಕಾರ್ಯಕ್ರಮದಿಂದಲೇ ಪಟ್ಟಭದ್ರ ಹಿತಾಸಕ್ತಿಗಳಿಗೆ ಅಪಾರ ಹಾನಿಯನ್ನುಂಟು ಮಾಡುವ ಒಂದು ಸಂಸ್ಥೆ ವಿರೋಧ ಎದುರಿಸಬೇಕಾಗುವುದು ಅನಿವಾರ್ಯ. ಅಂಥ ವಿರೋಧ ನಾನಾ ರೂಪಗಳಲ್ಲಿ ಬಂದಿವೆ. ಆ ಸಂಸ್ಥೆಯ ಮೂಲ ಉದ್ದೇಶ ಮತ್ತು ಗುರಿಯನ್ನೇ ನಾಶಮಾಡುವ ಸಂಕಲ್ಪವನ್ನು ಅವು ಹೊಂದಿವೆ, ಈ ತರದ ದಬ್ಬಾಳಿಕೆ, ಒಳಸಂಚುಗಳ ಹಿನ್ನೆಲೆಯಲ್ಲಿ ಪಶ್ಚಿಮ ಬಂಗಾಳದ ಪಂಚಾಯತಿಗಳ ಕಾರ್ಯ ಇನ್ನೂ ಹೆಚ್ಚು ಪ್ರಶಂಸನೀಯವಾಗಿವೆ.

ನೌಕರಶಾಹಿ ವರ್ಗದ ವಿರೋಧ

ಕೆಲವೊಂದು ಅಧಿಕಾರಿಗಳಿಂದಲೇ ಹೆಚ್ಚಿನ ಪ್ರತಿರೋಧ ಬಂದಿತ್ತು. ಪಂಚಾಯತಿ ಸದಸ್ಯರಿಗೆ ಶಿಕ್ಷಣ ಇಲ್ಲದಿರುವುದರಿಂದಲೂ, ಅವರು ರಾಜಕೀಯ ಪಕ್ಷಗಳಿಗೆ ಸೇರಿದವರಾಗಿರುವುದರಿಂದಲೂ; ಗ್ರಾಮಾಂತರ ಪ್ರದೇಶದ ಅಭಿವೃದ್ಧಿಗೆ ಪಂಚಾಯತಿಗಳು ಸರಿಯಾದ ಸಂಸ್ಥೆಗಳಲ್ಲ ಎಂದು ಈ ಅಧಿಕಾರಿಗಳು ಅಭಿಪ್ರಾಯ ವ್ಯಕ್ತ ಮಾಡುತ್ತಿದ್ದರು. ಅವರು ಈ ತರ ಹೇಳುತ್ತಿದ್ದರೂ ಕೂಡ, ಅವರ ವಿರೋಧಕ್ಕೆ ನಿಜವಾದ ಕಾರಣವೇನೆಂದರೆ, ಗ್ರಾಮಾಂತರ ಪ್ರದೇಶದ ಆಡಳಿತೆಯಲ್ಲಿ ತಮಗಿಂತ ಹೆಚ್ಚಾಗಿ, ಆರಿಸಿ ಬಂದ ಸದಸ್ಯರಿಗೆ ಹೆಚ್ಚು ಪ್ರಾಧಾನ್ಯ ನೀಡಿರುವುದಾಗಿದೆ. ಜಿಲ್ಲಾ ಪರಿಷತ್ ಅಧ್ಯಕ್ಷರಿಗೆ ತಾವು ಬರೀ ಮುಖ್ಯ ಆಡಳಿತಾತ್ಮಕ ಅಧಿಕಾರಿಗಳಾಗಿದ್ದೇವೆಂಬುದನ್ನು ಕೆಲವು ಜಿಲ್ಲಾ ಮ್ಯಾಜಿಸ್ಟ್ರೇಟರುಗಳು ನಂಬಲಾರದವರಾಗಿದ್ದಾರೆ; ಪಂಚಾಯತ್ ಸಮಿತಿಯ ಛೇರ್ಮನ್ನರಿಗೆ ತಾವು ಎಕ್ಸಿಕ್ಯೂಟಿವ್ ಅಧಿಕಾರಿಗಳಾಗಿರುವುದಕ್ಕೆ ಕೆಲವು ಬ್ಲಾಕ್ ಡೆವಲಪ್‌ಮೆಂಟ್ ಅಧಿಕಾರಿಗಳು ಅಸಮಾಧಾನ ವ್ಯಕ್ತ ಮಾಡಿದ್ದಾರೆ.

ಬ್ರಿಟಿಷರ ಕಾಲದಿಂದಲೂ, ಸರ್ಕಾರಿ ಅಧಿಕಾರಿಗಳೆಲ್ಲ ಜನತೆಯ ನಿಷ್ಠಾವಂತ ಸೇವಕರಾಗಿಯಲ್ಲ, ಆಳುವವರ ಆಡಂಬರ, ವೈಭವದಲ್ಲೇ ತಮ್ಮನ್ನು ನೋಡಿಕೊಳ್ಳುವ ಪರಿಪಾಠದವರಾಗಿದ್ದಾರೆ. ಆಳುವವರು – ಆಳಲ್ಪಡುವವರು ಎಂಬ ಸಂಬಂಧದ ನಿರಾಕರಣೆಯೇ ಇವರಲ್ಲಿ ಕೆಲವರಿಗೆ ನೋವನ್ನುಂಟು ಮಾಡಿದೆ. "ಇದೆಂಥ ನಿರಕ್ಷರಿ ರೈತ ನಿನ್ನೆ ತಾನೇ ಸಾಲ ಕೇಳುತ್ತ ನನ್ನ ಹತ್ತಿರ ಬಂದು "ಸರ್" ಎಂದು ಸಂಬೋಧಿಸಿದ್ದ, ಆದರೆ ಈಗ ಈತ ನನ್ನ "ಮಾಲಿಕ"ನಾಗಿದ್ದಾನೆ ಎಂದು ಹಲವಾರು ಅಧಿಕಾರಿಗಳು ಖಾಸಗಿಯಾಗಿ ಶೋಕಿಸುತ್ತಿದ್ದಾರೆ.

ಆಧಾರವಿಲ್ಲದ ಕಾರಣಗಳು

ಇವರ ಎರಡು ಕಾರಣಗಳನ್ನೂ ಸುಲಭವಾಗಿ ನಿರಾಕರಿಸಬಹುದು.

ಮೊದಲನೆಯದಾಗಿ ಪಾರ್ಟಿಗೆ ಸಂಬಂಧದ ಕುರಿತು ಹೇಳಬೇಕೆಂದರೆ, ಜಯಪ್ರಕಾಶ್‌ನಾರಾಯಣ್ ಅವರ "ಪಕ್ಷಾತೀತ ಪ್ರಜಾಪ್ರಭುತ್ವ" ಎಂಬ ಘೋಷಣೆ ಇದ್ದಾಗ್ಯೂ ಕೂಡ, ಚುನಾವಣೆಗಳಲ್ಲಿ ಪಕ್ಷಗಳು ಭಾಗಿದಾರರಾಗುವುದು ಅನಿವಾರ್ಯ. ಪಾಶ್ಚಿಮಾತ್ಯ ಬಂಡವಾಳಶಾಹಿ ಪ್ರಜಾಪ್ರಭುತ್ವಗಳಲ್ಲಿ ಕೂಡ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಹೀಗಾಗುವುದು ಸಹಜ. ಭಾರತ ದೇಶದಲ್ಲಿ, ಪಾರ್ಟಿಗೆ ಬದಲಾಗಿ, ಜಾತಿ, ಧರ್ಮ ಅಥವಾ ಭಾಷಾ ಗುಂಪುಗಳು ಮತ್ತು ಅತಿ ಕೀಳ್ಮಟ್ಟದ ಜಾತಿಯ ರಾಜಕಾರಣಗಳಿವೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳಲ್ಲಿ ಪಾರ್ಟಿ ಸಂಬಂಧ ಇದ್ದರೂ ಕೂಡ, ಅಂಥ ಸರ್ಕಾರಗಳಲ್ಲಿ ಕೆಲಸ ಮಾಡಲು ಈ ಅಧಿಕಾರಿಗಳ ಅಭಿಮಾನಕ್ಕೆ ಧಕ್ಕೆ ಬಾರದಿರುವಾಗ, ರಾಜಕೀಯ ಪಕ್ಷಗಳು ಸ್ಥಳೀಯ ಸರ್ಕಾರಗಳನ್ನು ರಚಿಸಿದಾಗ ಇವರ ನಾಜೂಕುತನಕ್ಕೆ ಧಕ್ಕೆಯಾಗುವುದು ಹೇಗೆ?

ಅದೇ ರೀತಿಯಲ್ಲಿ, ಪಂಚಾಯತಿ ಸದಸ್ಯರ ಶೈಕ್ಷಣಿಕ ಹಿಂದುಳಿದಿರುವಿಕೆಯ ಸಲುವಾಗಿ ನಾಚುವುದಾದರೂ ಯಾಕೆ? ಭಾರತದ ಸಾಮಾಜಿಕ ಜೀವನದ ಹಂತಗಳ ಪ್ರತಿನಿಧಿಗಳು ಪಂಚಾಯತಿಯ ಸದಸ್ಯರಾಗಬೇಕಾದರೆ, ಅವರಲ್ಲಿಯ ಬಹುಸಂಖ್ಯಾ ಜನರು ಅಲ್ಪ ಶಿಕ್ಷಣ ಪಡೆದವರೇ ಆಗಬೇಕಾಗುತ್ತದೆ. ಆದರೆ ವಿದ್ಯಾಭ್ಯಾಸದ ಕೊರತೆ ಮಾತ್ರ ಹಿಂದುಳಿದಿರುವಿಕೆಯಲ್ಲ. ರಾಜ್ಯ ಸರಕಾರ ಸಂಘಟಿಸಿದ ಬಿ. ಡಿ. ಓ. ಮತ್ತು ಪಂಚಾಯತಿ ಸಮಿತಿ ಅಧ್ಯಕ್ಷರ ಜಂಟೀ ಟ್ರೈನಿಂಗ್ ಕಾರ್ಯಕ್ರಮದಲ್ಲಿ, ಉಚ್ಚಮಟ್ಟದ ಸ್ಥಳೀಯ ನೈಪುಣ್ಯತೆಯನ್ನೂ, ತಮ್ಮ ಪ್ರದೇಶದ ಆರ್ಥಿಕ, ಸಾಮಾಜಿಕ, ರಾಜಕೀಯಗಳ ಹೆಚ್ಚಿನ ಅನುಭವ ಹಾಗೂ ತಿಳುವಳಿಕೆ ಹೊಂದಿರುವ ಮತ್ತು ಸರ್ಕಾರಿ ಅಧಿಕಾರಿಗಳಿಗಿಂತಲೂ ಹೆಚ್ಚು ಅಭ್ಯಾಸ ಮಾಡಿ, ಕೆಲಸ ಮಾಡುವ ಆತುರತೆ ತೋರಿಸುವ ಬಹಳಷ್ಟು ಪಂಚಾಯತಿ ಮುಖಂಡರನ್ನು ಗುರುತಿಸಲು ಸಾಧ್ಯವಾಯಿತು. ಶಿಕ್ಷಣದಲ್ಲಿಯ ಅವರ ಕೊರತೆಯನ್ನು, ಅವರಲ್ಲಿರುವ ಉತ್ಸಾಹ, ಪ್ರೌಢದೆಶೆ ಮತ್ತು ಕಲಿಯಬೇಕೆಂಬ ಆಸೆಯೂ, ಜನರಲ್ಲಿ ಅವರಿಗಿರುವ ಅಧಿಕಾರ ಹಾಗೂ ಪ್ರತಿಷ್ಠೆಯೂ ತುಂಬಿಕೊಡುತ್ತದೆ.

ಸಾದಾ ಶಿಕ್ಷಣ ತನ್ನ ಮಿತಿಯನ್ನು ಹೊಂದಿದೆ. ಆದರೆ ಗ್ರಾಮಾಂತರ ಪ್ರದೇಶದ ಸಮಾಜವನ್ನು ಎದುರಿಸುತ್ತಿರುವ ತೊಡಕಿನ ಸಮಸ್ಯೆಗಳನ್ನು ಎದುರಿಸಲು ಪದವಿ ಪಡೆದವರನ್ನು ಅವಶ್ಯವಾಗಿಯೂ ತಯಾರಿಗೊಳಿಸುವುದಿಲ್ಲ. ಆದರೆ ಅದೇ ಸಮಯದಲ್ಲಿ ತನ್ನ ವ್ಯಕ್ತಿತ್ವ, ಧೈರ್ಯಗಳಿಂದ, ಕೆಳದರ್ಜೆಯಿಂದ ಮೇಲಕ್ಕೇಳುವ ಸ್ಥಳೀಯ ಮುಖಂಡರು, ಚತುರತೆ, ಮತ್ತು ಕೆಲಸದ ಅನುಭವ ಪಡೆದವರಾಗಿ, ಸಮಸ್ಯೆಗಳನ್ನು ಪರಿಹರಿಸಲು ಮುಖಂಡತ್ವ ಒದಗಿಸುತ್ತಾರೆ.

ಗ್ರಾಮಾಂತರ ಪ್ರದೇಶದ ಈ ಆಡಳಿತೆಯನ್ನು ಎಲ್ಲ ನೌಕರದಾರರೂ ವಿರೋಧಿಸುತ್ತಾರೆಂದೇನಲ್ಲ. ಹಲವಾರು ಜನ ಪಂಚಾಯತಿಗಳೊಳಗಿನ ಸಂಬಂಧದ ಒಳ್ಳೆ ಗುಣಗಳನ್ನು ತಿಳಿದುಕೊಂಡವರೂ ಇದ್ದಾರೆ.

ಉದಾಹರಣೆಗೆ ಉಗ್ರಾಣ ಶಾಲೆ, ದವಾಖಾನೆ, ಕೊಳವೆಬಾವಿ, ಮುಂತಾದವುಗಳಿಗೆ ಪಂಚಾಯತಿಗಳ ಮೂಲಕ ಸ್ಥಳ ನಿರ್ಧರಿಸುವುದು-ಯಾವಾಗಲೂ ವಾದಗ್ರಸ್ತವಾಗಿದ್ದರೂ– ಸುಲಭವಾಗಿ ನಿರ್ಣಯ ತೆಗೆದುಕೊಳ್ಳಬಹುದು. ಸ್ಥಳದ ನಿಕಟವಾದ ಪರಿಚಯವಿರುವುದರಿಂದ, ಯಾವ ಪ್ರದೇಶ ಸಮಾಜಕ್ಕೆ ಹೆಚ್ಚು ಅನುಕೂಲವಾಗುತ್ತದೆ ಎಂಬುದನ್ನು ಕಂಡುಹಿಡಿಯಲು ಸಾಧ್ಯ. ಕೊನೆ ನಿರ್ಣಯ ತೆಗೆದುಕೊಳ್ಳುವುದಕ್ಕಿಂತ ಮುಂಚೆ, ಬೇರೆ ಬೇರೆ ಅಭಿಪ್ರಾಯಗಳ ಕುರಿತು ತೀಕ್ಷ್ಣವಾಗಿ ಚರ್ಚೆ ಮಾಡಿ ಒಂದು ನಿರ್ಣಯಕ್ಕೆ ಬರುವುದೊಳಿತು.

ಉಪಯೋಗಕರವಾದ ಪಾತ್ರ

ಹಾಗೆಯೇ ನೀರು ಹಂಚಿಕೆಯಂಥ ತಕರಾರುಗಳ ಕುರಿತಾದರೂ, ಸಮಸ್ಯೆಯ ತಿಳುವಳಿಕೆಯಿದ್ದ ಪಂಚಾಯತಿಗಳು ಅವುಗಳ ಪರಿಚಯವಿಲ್ಲದ ಅಧಿಕಾರಿಗಳಿಗಿಂತ ಸಮರ್ಪಕವಾಗಿ ಬಗೆಹರಿಸಲು ಸಾಧ್ಯ. ಇನ್ನು, ಸಹಕಾರಿ ಸಂಘಗಳ, ಬ್ಯಾಂಕುಗಳ ಸಾಲಗಳ ಮರುಪಾವತಿ ಅಥವಾ ಕೃಷಿಗೆ ಅವಕಾಶ ಮಾಡಿಕೊಡದೆ, ಕಾಡು ಬೆಳೆಸುವ ಪ್ರದೇಶಗಳನ್ನು ನಿರ್ಧರಿಸುವುದು ಮೊದಲಾದ ನಿಜವಾಗಿಯೂ ಅಪ್ರಿಯವಾದ ಆದರೆ ಸಾಮಾಜಿಕವಾಗಿ ಅವಶ್ಯವಾದ ನಿರ್ಣಯಗಳನ್ನು ಪಂಚಾಯತಿಯ ಮುಖಂಡರು ತಮ್ಮ ಸ್ಥಳೀಕ ಭಾಷೆಯಲ್ಲಿಯೇ ಅವುಗಳ ಪರಿಣಾಮಗಳನ್ನು ತಿಳಿಸಿ ಹೇಳಿ, ತಮ್ಮ ನೈತಿಕ ಬೆಂಬಲವನ್ನು ಪ್ರದರ್ಶಿಸಿ ಸುಲಭವಾಗಿ ಬಗೆಹರಿಸಬಹುದು,

ಭೂಮಿಯನ್ನು ಹಂಚುವುದರಲ್ಲಿ, ಬೇನಾಮಿ ಭೂಮಿಯನ್ನು ಕಂಡುಹಿಡಿಯುವುದರಲ್ಲಿ, ಪಾಲಿಗೆ ಕೃಷಿ ಮಾಡುವವರ ಮತ್ತು ಕೃಷಿ ಕಾರ್ಮಿಕರು ಇರುವ ಭೂಮಿಯ ಕಾಗದ ಪತ್ರ ತಯಾರಿಸುವುದರಲ್ಲಿ ಮತ್ತು ನವೀನ ಬೆಳೆ ಮಾಡುವ ಪದ್ಧತಿ, ಹೀಗೆ ಹಲವಾರು ಅಧಿಕಾರಿಗಳು ಇಂಥ ಸಮಸ್ಯೆಗಳಲ್ಲಿ ಪಂಚಾಯತಿಯ ಪಾತ್ರವನ್ನು ಪ್ರಶಂಸಿಸಿದ್ದಾರೆ.

ಆದರೆ ಪಂಚಾಯತ್ ರಾಜ್ಯವನ್ನು ವಿರೋಧಿಸುವವರು ಅದರ ಕಾರ್ಯದರ್ಶಿ ಯಾವಾಗಲೂ ಆತಂಕ ಉಂಟು ಮಾಡಬಹುದು. ಹೇಗೆಂದರೆ ಸರಕಾರದ ಆಜ್ಞೆಗಳನ್ನೆಲ್ಲ ತಮ್ಮ ಮನಸ್ಸಿಗೆ ಬಂದಂತೆ ವಿವರಣೆ ನೀಡಿ, ಕಲ್ಕತ್ತದಲ್ಲಿರುವ ರಾಜ್ಯಮಟ್ಟದ ಕಚೇರಿಗಳಲ್ಲಿರುವ ಕೆಲವರೆಲ್ಲ, ಮಂತ್ರಿಗಳ ನಿರ್ಣಯಗಳಲ್ಲಿ ತಪ್ಪು ಕಂಡುಹಿಡಿಯುವುದರಲ್ಲೇ ನೈಪುಣ್ಯತೆಯನ್ನು ಬೆಳೆಸಿಕೊಂಡು ಪಂಚಾಯತಿಗಳಿಗೆ ಹೆಚ್ಚು ಅಧಿಕಾರ ಕೊಡುವುದಕ್ಕೆ ತಡ ಮಾಡುತ್ತಿದ್ದಾರೆ.

ಬ್ಯಾಂಕುಗಳ ಕೂಡ ಸಂಬಂಧ

ಇಷ್ಟು ಗಂಭೀರವಾಗಿ ಅಲ್ಲದಿದ್ದರೂ, ಇದೇ ರೀತಿಯ ಸಮಸ್ಯೆ ಬ್ಯಾಂಕುಗಳೊಡನೆ ಪಂಚಾಯತಿಗಳ ಸಂಬಂಧದ ಕುರಿತು ಉದ್ಭವಿಸಿತ್ತು. ಇಂಟಿಗ್ರೇಟೆಡ್ ರೂರಲ್ ಡೆವಲಪ್‌ಮೆಂಟ್ ಪ್ರೋಗ್ರಾಂ (ಐ. ಆರ್. ಡಿ. ಪಿ.) (ಗ್ರಾಮಾಂತರ ಪ್ರದೇಶದ ಸರ್ವತೋಮುಖ ಅಭಿವೃದ್ಧಿ ಯೋಜನೆ) ಪ್ರಕಾರ ಸರ್ಕಾರದ ಸಬ್ಸಿಡಿ, ಸಹಾಯ ಪಡೆಯುವವನ ಸ್ವಂತ ಹಣ ಅಷ್ಟೇ ಅಲ್ಲದೆ ಬ್ಯಾಂಕಿನಿಂದಲೂ ಸಹಾಯ ಬರಬೇಕು. ಆದರೆ ಬ್ಯಾಂಕ್ ಸಾಲ ಸರಳವಾಗಿ ಬರುತ್ತಿಲ್ಲ.

ಬ್ಯಾಂಕುಗಳ ನಿಯಮಗಳ ಮತ್ತು ಬ್ಯಾಂಕುಗಳು ಒತ್ತಾಯಪಡಿಸುತ್ತಿರುವ ಯೋಜನೆಗಳ "ಆರ್ಥಿಕ ಸಾಫಲ್ಯ"ಗಳ ಕುರಿತು, ಪಂಚಾಯತಿಗೆ ಸರಿಯಾದ ಮಾಹಿತಿ ಇಲ್ಲದಿರುವುದು ಒಂದು ಆತಂಕವಾಗಿದೆ. ಇದಕ್ಕಿಂತಲೂ ಹೆಚ್ಚು ಗಂಭೀರವಾದ ಸಮಸ್ಯೆ ಯಾವುದೆಂದರೆ ಬ್ಯಾಂಕ್ ಅಧಿಕಾರಿಗಳ ನಡವಳಿಕೆ. ಯೋಜನೆಗಳನ್ನು ತಯಾರಿಸಲು, ಬ್ಯಾಂಕಿನ ಆಯಕಟ್ಟಿನೊಳಗೆ ಆ ಯೋಜನೆಗಳು ಬರುವಂತೆ ತಿದ್ದುಪಡಿಗಳನ್ನು ಮಾಡಲು ಗ್ರಾಮಾಂತರ ಪ್ರದೇಶದ ಹೊಸ ಮುಖಂಡತ್ವಕ್ಕೆ ಸಹಾಯ ಮಾಡದೆ, ಪಂಚಾಯತಿಗಳು ತಯಾರಿಸಿದ ಯೋಜನೆಗಳನ್ನು ನಿರಾಕರಿಸುವುದಕ್ಕೆ ಹೆಚ್ಚು ಆಸ್ತೆ ತೋರಿಸುತ್ತಾರೆ ಈ ಬ್ಯಾಂಕ್ ಅಧಿಕಾರಿಗಳು.

ಇದಕ್ಕೆ ಕಾರಣವೇನು ಎಂದರೆ, ಭೂಮಿ-ಆಸ್ತಿಯನ್ನು ಜಮಿನಾಗಿ ಕೊಡುವ ಕೆಲವೇ ಶ್ರೀಮಂತ ಸಾಲಗಾರರ ಕಾಗದ ಪತ್ರ ನೋಡಿ ಸಾಲ ಮಂಜೂರು ಮಾಡುವುದಕ್ಕೆ ಹೆಚ್ಚು ಶ್ರಮ ಬೇಕಾಗುವುದಿಲ್ಲ. ಆದರೆ ನೂರಾರು ಜನ ಅಲ್ಪ ಸಹಾಯ ಪಡೆಯುವವರ ಅರ್ಜಿಗಳನ್ನು ಪರಿಶೀಲಿಸಲು ಹೆಚ್ಚು ಸಮಯ ಮತ್ತು ಶ್ರಮ ಬೇಕಾಗುತ್ತದೆ. ಇಷ್ಟು ದಿವಸ ವ್ಯವಹರಿಸುತ್ತಿದ್ದ ಜನರೇ ಬೇರೆ, ವರ್ಗ ದೃಷ್ಟಿಯಿಂದ ಈಗ ವ್ಯವಹರಿಸಬೇಕಾದ ಜನರೇ ಬೇರೆಯಾಗಿರುವುದರಿಂದ ಇವರ ಕುರಿತು ಬ್ಯಾಂಕಿನವರಿಗೆ ಅಪನಂಬಿಕೆ ಉಂಟಾಗುತ್ತಿರುವುದು ಮತ್ತೊಂದು ಅಂಶವಾಗಿದೆ. ಕೆಲವು ದಿವಸಗಳ ಕಾರ್ಯ ಸ್ಥಗಿತ ಮತ್ತು ಕಡಿಮೆ ಪತ್ರ ವ್ಯವಹಾರಗಳ ನಂತರ ಕಳೆದ ಒಂದು ವರ್ಷದಲ್ಲಿ ಪರಿಸ್ಥಿತಿ ಸುಧಾರಿಸುತ್ತಿದೆ. ಯಾಕೆಂದರೆ ಪಂಚಾಯತಿ ಮುಖಂಡರು ಬ್ಯಾಂಕುಗಳ ನಿಯಮ, ಪದ್ಧತಿಗಳನ್ನು ಹೆಚ್ಚಾಗಿ ತಿಳಿದುಕೊಂಡಿದ್ದಾರೆ. ಹಾಗೆಯೇ ಪಂಚಾಯತಿಗಳು ಖಾಯಂ ಆಗಿ ಉಳಿಯುತ್ತವೆ. ಅವುಗಳನ್ನು ನಿರ್ಲಕ್ಷಿಸಲು ಸಾಧ್ಯವಿಲ್ಲ ಎಂಬ ತಿಳುವಳಿಕೆ ಬ್ಯಾಂಕಿನವರಲ್ಲುಂಟಾಗಿದೆ.

ಸ್ಥಳೀಯ ವಾದದ ಸಮಸ್ಯೆ

ಗ್ರಾಮಾಂತರ ಪ್ರದೇಶದ ಜೀವನದಲ್ಲಿ ಆಳವಾಗಿ ಬೇರೂರಿರುವ ಸ್ವಹಿತ ಸಾಧಕರ ಪ್ರಶ್ನೆ ಮೂರನೆಯದ್ದಾಗಿದೆ. ಇವರ ಒಳಸಂಚು ಹಲವಾರು ರೂಪಗಳನ್ನು ತಾಳುತ್ತದೆ.

ಮೊದಲನೆಯದಾಗಿ ಸ್ಥಳೀಯವಾದದ ಸಿದ್ಧಾಂತ. ಕಾಂಗ್ರೆಸ್ ಆಡಳಿತದಲ್ಲಿ ಕೆಲವೇ ಹಳ್ಳಿಗಳಿಗೆ ಅಭಿವೃದ್ಧಿ ಕಾರ್ಯಗಳಿಂದ ನಿಜವಾಗಿಯೂ ಲಾಭ ಸಿಕ್ಕಿದೆ. ಅದೂ ಕೂಡ ಪ್ರಭಾವಿತ ರಾಜಕಾರಣಗಳ ಮತ್ತು ಮಂತ್ರಿಗಳೊಡನೆ ಸಂಬಂಧ ಇದ್ದವರಿಗಷ್ಟೇ ಲಾಭ. ಎಡರಂಗ ಅಧಿಕಾರಕ್ಕೆ ಬಂದ ನಂತರ ಅದರಲ್ಲೂ ಪಂಚಾಯತಿ ರಾಜ್ಯ ಸ್ಥಾಪನೆಯಾದ ನಂತರ ಬಹು ಮುಖ್ಯವಾದ ಬದಲಾವಣೆಯಾಗಿದೆ. ಈಗ ಸರ್ಕಾರದ ಸಹಾಯವೆಲ್ಲ ಗ್ರಾಮ ಪಂಚಾಯತಿಗಳಿಗೂ, ಪಂಚಾಯತಿ ಸಮಿತಿಗಳಿಗೂ ಸರಿಯಾಗಿ ವಿತರಣೆಯಾಗುತ್ತಿದೆ.

ಉದಾಹರಣೆಗಾಗಿ, ಈಗ "ಕೆಲಸಕ್ಕಾಗಿ ಕಾಳು" ಯೋಜನೆಯಂತೆ ಹಣ ಮತ್ತು ಗೋಧಿಯನ್ನು ಪ್ರತಿಯೊಂದು ಪಂಚಾಯತಿಗೆ ಸರಿಯಾಗಿ ಹಂಚಲಾಗುತ್ತಿದೆ; ಇದರಂತೆಯೇ ಐ. ಆರ್. ಡಿ. ಪಿ. ಯೋಜನೆಯ ಹಣವನ್ನೂ ಪಂಚಾಯತ್ ಸಮಿತಿಗಳಿಗೆ ಒದಗಿಸಲಾಗುತ್ತಿದೆ. ಪ್ರತಿಯೊಂದು ಗ್ರಾಮಕ್ಕೆ ಶಾಲೆ, ಕೊಳವೆ ಬಾವಿ, ಗೃಹ ನಿರ್ಮಾಣಗಳಂಥ ಕಾರ್ಯಗಳಿಗೂ ಸರಿಯಾಗಿ ಹಣ ಹಂಚಲಾಗುತ್ತಿದೆ. ಈಗ ಇಡೀ ಗ್ರಾಮಾಂತರ ಪ್ರದೇಶಕ್ಕೆ ಹಣ ಖರ್ಚಾಗುತ್ತಿರುವುದರಿಂದ ಸ್ಥಳೀಯ ವಾದಕ್ಕೆ ಅವಕಾಶ ಇಲ್ಲದಂತಾಗಿದೆ.

ತಮ್ಮ ಹಳ್ಳಿಗಳಿಗೆ ಧನ ಸಹಾಯ ಬರುತ್ತಿರುವುದನ್ನು ಕಂಡ ಸ್ವಹಿತ ಸಾಧಕರು ಇನ್ನೂ ಹೆಚ್ಚಿನ ಸಹಾಯಕ್ಕೆ ಆಸೆ ಪಡುತ್ತಾರೆ. ಜಿಲ್ಲೆ, ಬ್ಲಾಕ್, ಗ್ರಾಮಗಳಲ್ಲಿ ಎಷ್ಟು ಹಣ ವಿತರಣೆಯಾಗಬೇಕೆಂಬುದರ ಕುರಿತು ಅವರು ವಿಚಾರ ಮಾಡದೆ, ಒಂದೇ ಹಳ್ಳಿಗೆ

ಪಂಚಾಯತ್ ರಾಜ್ಯದ ಅನುಭವ

ಅಥವಾ ಹಳ್ಳಿಯ ವಿಭಾಗಕ್ಕೆ ಎಷ್ಟು ಸಹಾಯ ಬರಬೇಕಾಗಿದೆ ಎಂದಷ್ಟೇ ಅವರು ವಿಚಾರ ಮಾಡುತ್ತಾರೆ.

ಸರ್ಕಾರ ಸರ್ವ ಪ್ರಯತ್ನ ಮಾಡಿದರೂ ಕೂಡ ಒಂದು ಪ್ರದೇಶಕ್ಕೆ ಸಿಗುವಷ್ಟೇ ಸಹಾಯ ಮತ್ತೊಂದು ಪ್ರದೇಶಕ್ಕೆ ಒದಗಿಸುವುದು ಸಾಧ್ಯವಿಲ್ಲ. ಅಷ್ಟೇ ಅಲ್ಲ ಅದು ಸರಿಯೂ ಅಲ್ಲ. ಉದಾಹರಣೆಗಾಗಿ ಒಂದು ಶಾಲೆ ಅಥವಾ ದವಾಖಾನೆಯನ್ನು ಸಾರಿಗೆ ವ್ಯವಸ್ಥೆ ಇರುವ, ಹಾಗೆಯೇ ಜನರಿಗೆ ಅನುಕೂಲಕರವಾದ ಸ್ಥಳದಲ್ಲಿ ಇರಬೇಕಾಗಿದೆ. ಅಂಥಲ್ಲಿ ಶಾಲೆ, ದವಾಖಾನೆಗಳಿದ್ದರೆ ಇಡೀ ಗ್ರಾಮ ಪಂಚಾಯತಿಗೆ ಲಾಭವಾಗುತ್ತದೆ. ಆದರೆ ಪಟ್ಟಭದ್ರ ಹಿತಾಸಕ್ತಿಗಳು ಕೆಲವೇ ಹಳ್ಳಿಗಳಿಗೂ, ಪ್ರದೇಶಕ್ಕೂ ಹೆಚ್ಚು ಲಾಭ, ಅನುಕೂಲ ದೊರೆಯುವಂತೆ ವಿಚಾರ ಮಾಡುತ್ತಾರಲ್ಲದೆ, ಇಡೀ ಗ್ರಾಮ ಪಂಚಾಯತಿಯ ಹಿತದ ದೃಷ್ಟಿಯಿಂದಲ್ಲ.

ಪ್ರಾದೇಶಿಕ ಭಾವನೆಗಳನ್ನೆಬ್ಬಿಸಿ, ಕೃಷಿ ಕಾರ್ಮಿಕರು, ಪಾಲಿನಲ್ಲಿ ಹೊಲ ಮಾಡುವವರು, ಸಣ್ಣ ಮತ್ತು ಮಧ್ಯಮ ರೈತರೆಲ್ಲ ತಮ್ಮ ವರ್ಗ ಹಿತವನ್ನು "ಸ್ಥಳೀಯ ದೇಶ ಪ್ರೇಮಕ್ಕೆ" ಇಳಿಸಿ, ಇತರ ಹಳ್ಳಿಗಳ ವಿರುದ್ಧ ಸುಲಿಯುವ ವರ್ಗದ ಜೊತೆಯಲ್ಲಿ ಸೇರಬೇಕೆಂದು ಇವರ ಅಪೇಕ್ಷೆಯಾಗಿದೆ.

ನೌಕರಿಯ ಕುರಿತೂ ಇಂಥ ಸ್ಥಳೀಕವಾದವನ್ನೇ ಎತ್ತಲಾಗುತ್ತಿದೆ. ಇಲ್ಲಿ "ಮಣ್ಣಿನ ಮಕ್ಕಳು" ಎಂದರೆ ಯಾವ ಹಳ್ಳಿಯಲ್ಲಿ ಕಛೇರಿ ಇದೆಯೋ ಅಥವಾ ಒಕ್ಕಲೇತರ ಚಟುವಟಿಕೆ ನಡೆಯುವಂತೆ ತಿಳುವಳಿಕೆಯಿಂದಲೇ ಪ್ರಯತ್ನ ನಡೆಯುತ್ತಿದೆ. ಉದಾಹರಣೆಗೆ ಪಾಲಿಗೆ ಕೃಷಿ ಮಾಡುವವನಿಗೆ ಅವನ ಹಕ್ಕನ್ನು ಕೊಡಿಸಿದಾಗ, ಅದರಲ್ಲಿ ಆ ಮುಂಚೆ ಇದ್ದ ಪಾಲಿಗೆ ಕೃಷಿ ಮಾಡುವವರೊಳಗೆ—ಇವರಿಬ್ಬರೂ ಬಡವರಾಗಿದ್ದು, ಹಳ್ಳಿಯ ಶ್ರೀಮಂತರಿಂದ ಸುಲಿಯಲ್ಪಡುತ್ತಿದ್ದರೂ—ಜಗಳ ಹಚ್ಚುತ್ತಾರೆ. ಅಥವಾ ಕೃಷಿ ಕಾರ್ಮಿಕ ಮತ್ತು ಸಣ್ಣ ರೈತ ಅಥವಾ ಪಾಲಿಗೆ ಕೃಷಿ ಮಾಡುವವ ಮತ್ತು ಕಾಯಿದೆಯಿಂದ ರಕ್ಷಣೆ ಒದಗಿಸಲ್ಪಟ್ಟ ವಿಧವಾ ಭೂ ಮಾಲಕರೊಳಗಿನ ವೈರುಧ್ಯ. ಸ್ವಹಿತ ಸಾಧಕರ ಪ್ರವೇಶವಿಲ್ಲದೆಯೇ, ಪಂಚಾಯತಿ ಮತ್ತು ಕಿಸಾನಸಭೆಯ ಮುಖಂಡರು ಇಂಥ ವೈರುಧ್ಯಗಳನ್ನು ತಾವೇ ಮಧ್ಯಪ್ರವೇಶಿಸಿ, ಚರ್ಚೆ ಮಾಡಿ ಬಗೆಹರಿಸಲು ಸಾಧ್ಯವಿದೆ, ಬಗೆ ಹರಿಸುತ್ತಿದ್ದಾರೆ. ಸ್ಥಳೀಯ ಪ್ರಶ್ನೆಯಂತೆಯೇ ಇಲ್ಲಿ ಕೂಡ, ವರ್ಗ ಜಾಗೃತಿಯನ್ನು ಕಡೆಗಣಿಸಿ, ಎರಡೂ ಕಡೆಯ ಜನರ ಪಾರ್ಟಿ ಸಂಬಂಧಕ್ಕೆ ಮಹತ್ವಕೊಟ್ಟು ಗೊಂದಲ ಉಂಟುಮಾಡಿ ಲಾಭ ಪಡೆಯುವ ಪ್ರಯತ್ನ ಮಾಡುತ್ತಿದ್ದಾರೆ ಈ ಜನ.

ಆಂತರಿಕ ಕುಟುಂಬ ಜಗಳಗಳು ಹುಟ್ಟಿಕೊಂಡಾಗಲೂ ಅವುಗಳಿಗೆ ಪಾರ್ಟಿ ಸಂಬಂಧ ಕಲ್ಪಿಸಲಾಗುತ್ತಿದೆ. ಹಳ್ಳಿ ಜನರು ದರೋಡೆಕೋರರನ್ನು ಹೊಡೆದಾಗ ಅಥವಾ ಕೊಂದಾಗಲೂ, ಅಂಥವರನ್ನು ಕಾಂಗ್ರೆಸ್ ಪಕ್ಷದ ಹುತಾತ್ಮರೆಂದು, "ಸಾಮಾಜಿಕ ಕಾರ್ಯಕರ್ತ"ರೆಂದೂ ಹೇಳಿ (ಕಾಂಗ್ರೆಸ್ಸಿನ ಗುಂಡಾ ಜನರನ್ನು ಈ ಹೆಸರಿನಲ್ಲಿ ಕರೆಯಲಾಗುತ್ತಿದೆ).

ಹಿತಾಸಕ್ತಿಗಳನ್ನು ಬಲಿದಾನಗೊಳಿಸುತ್ತಿದೆ, ಮತ್ತು ಪಾಲಿಗೆ ಕೃಷಿಮಾಡುವ ರೈತರಿಂದ ಹೆಚ್ಚಿನ ಪಾಲಿಗಾಗಿ, ಕೃಷಿ ಕೂಲಿಗಾರರಿಂದ ಹೆಚ್ಚಿನ ಕೂಲಿಗಾಗಿ ತೊಂದರೆಗೊಳಪಟ್ಟ ಮಧ್ಯಮ ವರ್ಗದ ರೈತರೆಲ್ಲ ಎಡರಂಗದ ವಿರುದ್ಧ ಹೋರಾಡಲು ತಮ್ಮೊಡನೆ ಸೇರಿಕೊಳ್ಳಬೇಕೆಂದು ಇವರು ಪ್ರಚಾರ ಮಾಡುತ್ತಿದ್ದಾರೆ. ಬಂಡವಾಳಶಾಹಿ ಪತ್ರಿಕೆಗಳು ಈ ಪ್ರಚಾರಕ್ಕೆ ಮಹತ್ವ ಕೊಡುತ್ತಿವೆ. ಒಟ್ಟು ಪಂಚಾಯತ್ ಸದಸ್ಯರ ಪೈಕಿ ಕಾಲುಭಾಗವಷ್ಟೇ ಮಧ್ಯಮ ರೈತರಿರುವುದರಿಂದ ಮತ್ತು ಹೆಚ್ಚಿನ ಪಂಚಾಯತಿಗಳಲ್ಲಿ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲೆಗಳ ಶಿಕ್ಷಕರು ಪ್ರಾಮುಖ್ಯ ಪಾತ್ರ ವಹಿಸುತ್ತಿರುವುದರಿಂದ ಈ ಪ್ರಚಾರ ಯಾವದೇ ಪರಿಣಾಮ ಉಂಟುಮಾಡುವುದರಲ್ಲಿ ವಿಫಲಗೊಂಡಿದೆ.

ಪಂಚಾಯತಿಗಳ ಕಾರ್ಯಕ್ರಮ ನಿಸ್ಸಂಶಯವಾಗಿಯೂ ಬಡಜನರ ಪರವಾಗಿದ್ದರೂ ಕೂಡ, ಇತರ ವರ್ಗದ ರೈತರನ್ನು ಅದು ಕಡೆಗಣಿಸಿಲ್ಲ. ಪಂಚಾಯತ ಪದ್ಧತಿ ಮೂಲಕ ಅವರೂ ಸಾಕಷ್ಟು ಲಾಭಗಳಿಸಿದ್ದಾರೆ. ಚುನಾವಣೆಗಳ ಮೂಲಕ ರಚಿಸಲ್ಪಟ್ಟ ಪಂಚಾಯತಿಗಳು ಹಳ್ಳಿಯ ಸರ್ವ ಜನತೆಯ ಪರವಾಗಿರುತ್ತದೆ. ಸ್ಥಿರವಾಗಿ ತಳಊರಿರುವ ಪಟ್ಟಭದ್ರ ಹಿತಾಸಕ್ತಿಗಳಿಗೆ ಅದೊಂದು ಬಲಿಷ್ಟವಾದ ಆಹ್ವಾನವಾಗಿದೆ. ಅದು ಬಡವರಿಗಷ್ಟೇ ಅನುಕೂಲತೆಗಳನ್ನು ಮಾಡಿಕೊಟ್ಟಿರುವುದಲ್ಲದೆ, ಮಧ್ಯಮ ಹಾಗೆಯೇ ಸಿರಿವಂತ ರೈತರ ಒಂದು ವಿಭಾಗಕ್ಕೂ ಲಾಭದಾಯಕವಾಗಿದೆ.

ತಡೆಗಳನ್ನು ತೆಗೆದುಹಾಕಿದ್ದರಿಂದ, ಇಷ್ಟು ವರ್ಷ ಬಡ್ಡಿ ವ್ಯವಹಾರಗಳನ್ನು, ಭೂಮಾಲಿಕರನ್ನು, ಸಿರಿವಂತ ರೈತರನ್ನು ಹೆಚ್ಚು ಬಡ್ಡಿಯಲ್ಲಿ ಹಣ ಪಡೆಯಲು ಅವಲಂಬಿಸುತ್ತಿದ್ದ ಎಲ್ಲ ರೈತರಿಗೆ ಅನುಕೂಲವಾಗಿದೆ. ಶಿಕ್ಷಣ ಪುಕ್ಕಟೆ ಮಾಡಿರುವುದರಿಂದ, ಪ್ರತಿಯೊಂದು ಹಳ್ಳಿಯಲ್ಲಿ ಶಾಲೆ ಸ್ಥಾಪಿಸಿರುವುದರಿಂದ, ಬಡ ಕುಟುಂಬದ ಮಕ್ಕಳ ಶಿಕ್ಷಣಕ್ಕೆ ಧನಸಹಾಯಮಾಡುವುದರಿಂದ, ಪ್ರೌಢ ಶಿಕ್ಷಣ ವಿಸ್ತಾರಗೊಳಿಸಿರುವುದರಿಂದ ಕಳೆದ 5 ವರ್ಷಗಳಲ್ಲಿ ಶಿಕ್ಷಣ ಹೊಸ ಕ್ಷೇತ್ರ ತಲ್ಪಿದೆ. ಇಷ್ಟು ವರ್ಷ ವಿದ್ಯಾಭ್ಯಾಸ ಲಭ್ಯವಾಗದವರಿಗೆಲ್ಲ ಶಿಕ್ಷಣದ ಅವಕಾಶ ಮಾಡಿಕೊಟ್ಟಿರುವುದರಿಂದ ಮಧ್ಯಮ ವರ್ಗದವರಿಗೆ ಶಿಕ್ಷಕರಾಗಿ ಕೆಲಸ ಮಾಡುವ ಅವಕಾಶ ಸಿಕ್ಕಂತಾಗಿದೆ.

ನಾಲ್ಕು ಎಕ್ರೆಗಿಂತ ಕಡಿಮೆ ಭೂಮಿ ಇದ್ದವರಿಗೂ, ವಾರ್ಷಿಕ ಉತ್ಪನ್ನ ರೂ. 50,000 ಇದ್ದವರಿಗೂ ಭೂಕಂದಾಯ ಮಾಫಿ ಮಾಡಿರುವುದರಿಂದ ಬಡವರ್ಗದವರಂತೆಯೇ ಮಧ್ಯಮ ವರ್ಗದವರಿಗೂ ಲಾಭವಾಗಿದೆ.

ಹೀಗಾಗಿ, ಬಡ್ಡಿ ವ್ಯವಹಾರಿಗಳ, ದೊಡ್ಡ ವ್ಯಾಪಾರಸ್ಥರ, ಮತ್ತು ಬಹಳಷ್ಟು ಭೂಮಿಯನ್ನು ಗುತ್ತಿಗೆ ಪಡೆದು, ಇಡೀ ಗ್ರಾಮವನ್ನೇ ತನ್ನ ಹಿಡಿತದಲ್ಲಿಟ್ಟುಕೊಳ್ಳಲು ಪ್ರಯತ್ನಿಸುವವರ ವಿರುದ್ಧ ಹೋರಾಟದಲ್ಲಿ ಬಡಜನರೊಡನೆ ಸೇರಿಕೊಂಡರೆ, ಬಡಜನರ ನ್ಯಾಯವಾದ ಹಕ್ಕುಗಳನ್ನು ಒಪ್ಪಿಕೊಳ್ಳುವುದರಿಂದುಂಟಾಗುವ ನಷ್ಟವನ್ನು ತುಂಬಿಕೊಳ್ಳಬಹುದು. ಇದರಿಂದಾಗಿ ಅವರಿಗೆ ಸಿಗುವ ಲಾಭವೇ ಹೆಚ್ಚು. ತನ್ನನ್ನು ಒಕ್ಕಲೆಬ್ಬಿಸಬಹುದೆಂಬ ಭೀತಿಯಿಲ್ಲದ ರೈತ, ಭೀತಿಗೊಳಗಾದ ರೈತನಿಗಿಂತ ಹೆಚ್ಚು ಉತ್ಪಾದನೆ ತೆಗೆಯುತ್ತಿರುವುದನ್ನು ಸಿರಿವಂತ ರೈತರು ಆಶ್ಚರ್ಯ ವ್ಯಕ್ತ ಮಾಡುತ್ತಿದ್ದಾರೆ. ಹೀಗಾಗಿ ಭೂಮಾಲಿಕನಿಗೆ ಹಣದ ರೂಪದಲ್ಲಿ ಸಿಗುವ ಪಾಲಿನಲ್ಲಿ ಏನೂ ಕಡಿಮೆಯಾಗುತ್ತಿಲ್ಲ. ವ್ಯಾಪಾರಸ್ಥರೂ ಬಡ್ಡಿ ವ್ಯವಹಾರಿಗಳೂ ಮತ್ತು ಕೇಂದ್ರ ಸರಕಾರದ ಹಲವಾರು ಏಜನ್ಸಿಗಳು ಬೆಂಬಲ ಬೆಲೆ ನಿರ್ಣಯಿಸಿ, ಅದೇ ಬೆಲೆಯಲ್ಲಿ ಧಾನ್ಯ ಖರೀದಿ ಮಾಡುತ್ತಿರುವುದರಿಂದ, ರೈತರ ಬೆಳೆಗೆ ನ್ಯಾಯಬೆಲೆ ನಿರಾಕರಿಸಲಾಗುತ್ತಿದೆ. ಆದ್ದರಿಂದ ತಮ್ಮ ಒಕ್ಕಲತನ ಹುಟ್ಟುವಳಿಗೆ ನ್ಯಾಯಬೆಲೆ ಪಡೆಯಬೇಕೆಂಬುದು ಪ್ರತಿಯೊಬ್ಬನ ಆಸೆಯಾಗಿದೆ. ಇದರಿಂದಲೂ ಮೇಲ್ವರ್ಗದ ರೈತರಿಗೆ ಲಾಭವಾಗುತ್ತದೆ.

ಮತ್ತೊಂದು ಆರೋಪ

ಪಟ್ಟಭದ್ರ ಹಿತಾಸಕ್ತಿಗಳ ಜೊತೆಯಲ್ಲಿ ಕೇಂದ್ರ ಸರಕಾರ ಸೇರಿಕೊಂಡು ಹೊರಿಸುತ್ತಿರುವ ಮತ್ತೊಂದು ಆರೋಪವೇನೆಂದರೆ, ಪಂಚಾಯಿತಿಗಳು ತಮಗಿಷ್ಟ ಬಂದವರಿಗಷ್ಟೇ ಪರಿಹಾರ ಹಂಚುತ್ತಿದ್ದಾರೆಂಬುದಾಗಿದೆ. ಇದು ನಿಜವಾಗಿರುತ್ತಿದ್ದರೆ 1978ರ ನೆರೆಹಾವಳಿಯಾದಾಗ, 1982ರಲ್ಲಿ ದುಷ್ಕಾಳ ಬಿದ್ದಾಗ, ಅಲಕ್ಷ್ಯ ಮಾಡಲ್ಪಟ್ಟ ಕಾಂಗ್ರೆಸ್ ಸದಸ್ಯರನ್ನೆಲ್ಲ ಹಳ್ಳಿಗಳಿಂದ ಓಡಿಸಿ

ಪಟ್ಟಣಗಳಲ್ಲಿ ನೆಲೆಸುವಂತೆ ಮಾಡುತ್ತಿದ್ದರು. ಆದರೆ ಯಾರೊಬ್ಬರೂ ಅವರು ಕಾಂಗ್ರೆಸ್ಸಿನವರಾಗಿರಲಿ, ಎಡರಂಗದ ಬೆಂಬಲಿಗರಾಗಲೀ ಅಥವಾ ಬೇರೆ ಯಾರೇ ಆಗಲಿ ಹಳ್ಳಿಗಳನ್ನು ಬಿಟ್ಟಿಲ್ಲವೆಂಬುದು ಪರಿಹಾರ ಹಣ ಸರಿಯಾಗಿಯೇ ವಿತರಣೆಯಾಗಿದೆಂಬುದಕ್ಕೆ ಸಾಕ್ಷಿಯಾಗಿದೆ. ಪ್ರಕೃತಿಯ ಪ್ರಕೋಪಗಳನ್ನು ಈಕ್ಷಿಸಲು ಕೇಂದ್ರ ಸರಕಾರದಿಂದ ಬಂದಂಥಾ ಅಧಿಕಾರಿಗಳನ್ನು ವಿಚಾರಣೆ ನಡೆಸಿದಾಗ ಇಂಥ ಆರೋಪಗಳಿಗೆ ಸಾಕ್ಷಾಧಾರಗಳಿಲ್ಲೆಂದು ವರದಿ ಮಾಡಿದ್ದಾರೆ. ಕಳೆದ 5 ವರ್ಷಗಳಲ್ಲಿ ನಡೆದ ಲೋಕಸಭೆ, ಅಸೆಂಬ್ಲಿ ಮತ್ತು ಉಪಚುನಾವಣೆಗಳಲ್ಲಿ ಅಂಥ ಆರೋಪಗಳನ್ನು ನಿರಾಕರಿಸಿ, ಭ್ರಷ್ಟಾಚಾರ, ಪರಿಹಾರ ಧನದ ದುರುಪಯೋಗಗಳಂಥ ಆರೋಪಗಳನ್ನೇ ದೊಡ್ಡದಾಗಿ ಮಾಡಿ ಪ್ರಚಾರ ಮಾಡಿದ ಕಾಂಗ್ರೆಸ್ಸನ್ನು ಸೋಲಿಸಿ, ಎಡರಂಗದ ಪರವಾಗಿ ಬಹುಮತ ನೀಡಿದ್ದಾರೆ. ಅಷ್ಟೇ ಅಲ್ಲದೆ, ಎಡರಂಗವು ಪರಿಹಾರ ಧನವನ್ನು ಪಕ್ಷಪಾತದಲ್ಲಿ ವಿತರಣೆ ಮಾಡಿದ್ದಾಗಿದ್ದರೆ, ಕಿಸಾನ ಸಭೆಯ ಸದಸ್ಯತ್ವ 5 ವರ್ಷದಲ್ಲಿ 4 ಲಕ್ಷದಿಂದ 52 ಲಕ್ಷಕ್ಕೇರುತ್ತಿರಲಿಲ್ಲ. ಹಿಂದೆ ಕಾಂಗ್ರೆಸ್ಸಿಗೆ ಬೆಂಬಲ ಕೊಡುತ್ತಿದ್ದವರು ಈಗ ಎಡರಂಗದ ಕಡೆ ಬರುತ್ತಿದ್ದಾರೆಂಬುದನ್ನು ಇದು ತೋರಿಸಿ ಕೊಡುತ್ತದೆ.

ಆದರೂ ಕೂಡ ಪಕ್ಷಪಾತದ ಪ್ರಶ್ನೆಯನ್ನೆತ್ತಿ ಕೇಂದ್ರ ಸರಕಾರ ಗ್ರಾಮ ಪಂಚಾಯತಿಗಳಿಗೆ "ಕೆಲಸಕ್ಕಾಗಿ ಆಹಾರ" ಕಾರ್ಯಕ್ರಮದ ಪ್ರಕಾರ ಗೋಧಿ ಒದಗಿಸಲು ನಿರಾಕರಿಸಿದೆ.

ಭ್ರಷ್ಟಾಚಾರದ ಆರೋಪ

ಪಂಚಾಯತ್ ಮುಖಂಡತ್ವದ ವಿರುದ್ಧ ಕಾಂಗ್ರೆಸ್ ಮತ್ತು ಗುತ್ತೇದಾರಿ ಪತ್ರಿಕೆಗಳು ಭ್ರಷ್ಟಾಚಾರದ ಆರೋಪಗಳನ್ನು ಸತತವಾಗಿ ಹೇರುತ್ತಿದ್ದಾರೆ. ಆದರೆ ಪಂಚಾಯತ್ ರಾಜ್ಯದಲ್ಲಿ ಭ್ರಷ್ಟಾಚಾರ ಕಡಿಮೆಯಾಗಿದೆ, ಮತ್ತು ಅದಾದಾಗ ಕಂಡುಹಿಡಿಯುವುದು ಸುಲಭ. ಕೆರೆಯಲ್ಲಿಯ ಮಣ್ಣು ತೆಗೆಯುವ ಕಂಟ್ರಾಕ್ಟನ್ನು ಒಬ್ಬ ಪಂಚಾಯತಿ ಮುಖಂಡ ತನ್ನ ಸಂಬಂಧಿಕರಿಗೆ ಕೊಟ್ಟರೆ, ಅಥವಾ ಅಯೋಗ್ಯ ಅಣ್ಣ ತಮ್ಮಂದಿರನ್ನು ಪ್ರೌಢಶಾಲೆಯ ಶಿಕ್ಷಕರನ್ನಾಗಿ ನೇಮಿಸಿದರೆ, ಅದು ಕೂಡಲೇ ಎಲ್ಲ ಕಡೆ ಪ್ರಚಾರದಲ್ಲಿ ಬರುತ್ತದೆ. ನಕಾಶೆಯಲ್ಲಿಷ್ಟೇ ತೋರಿಸಿ ನಿಜವಾಗಿಯೂ ಮಾಡಲ್ಪಡದ ಒಂದು ರಸ್ತೆಗಾಗಿ ತೆಗೆದಿಟ್ಟ ಹಣವನ್ನು ಈಗ ತೆಗೆಯಲು ಸಾಧ್ಯವಿಲ್ಲ. ಭ್ರಷ್ಟಾಚಾರವನ್ನು ತಡೆಯಲು ಇದಕ್ಕಿಂತ ಉತ್ತಮ ಉಪಾಯ ಬೇರೆಯಾವದುಂಟು.

ಭ್ರಷ್ಟಾಚಾರವೇ ಇಲ್ಲೆಂದು ಇದರರ್ಥವಲ್ಲ. ಪಂಚಾಯತ್ ಪದ್ಧತಿಯೊಂದು ಪ್ರತ್ಯೇಕವಾದ ದ್ವೀಪವಲ್ಲ. ಇಡೀ ರಾಜ್ಯದ ಮಟ್ಟದಲ್ಲಿ ನೋಡಿದರೆ ಪಂಚಾಯತಿಗಳಲ್ಲಿ ಭ್ರಷ್ಟಾಚಾರ ಅತಿ ಕಡಿಮೆಯಿದ್ದಿದೆ.

(7ನೇ ಪುಟ ನೋಡಿ)

ತ್ತಿದೆಯೋ ಅಲ್ಲಿಯೇ ಹುಟ್ಟಿದವರೆಂದರ್ಥ. ಸ್ಥಳೀಯ ಉದ್ಯೋಗ ವಿನಿಮಯ ಕೇಂದ್ರಗಳ ಮೂಲಕ ನೌಕರಿ ಕೊಡಿಸುವುದನ್ನು ಇವರು ವಿರೋಧಿಸುತ್ತಾರೆ. ವರ್ಗ ಸಂಬಂಧಗಳನ್ನೆಲ್ಲ ಬಿಟ್ಟು ಇಂಥ ಘೋಷಣೆಗಳಿಂದ ಸ್ಥಳೀಕರ ಬೆಂಬಲ ಪಡೆಯಲು ಪ್ರಯತ್ನ ಮಾಡುತ್ತಾರೆ. ಅದರ ಮೂಲಕ ತಮ್ಮ ಹಳ್ಳಿಗೆ ಪಕ್ಷಪಾತ ತೋರಿಸಲಾಗುತ್ತಿದೆ ಎಂದು ಹೇಳಿ ಪಂಚಾಯತಿ ಮುಖಂಡರಿಗೆ ಕಿರುಕುಳ ಕೊಡುತ್ತಾರೆ.

ವರ್ಗ ವೈರುಧ್ಯದ ಅಪಾರ್ಥ

ವರ್ಗ ಸ್ವರೂಪದ ವೈರುಧ್ಯವನ್ನು ಪಾರ್ಟಿಯ ಆಂತರಿಕ ವೈರುಧ್ಯವೆಂದು ಹೇಳುವ ನಿರಂತರ ಪ್ರಯತ್ನವನ್ನು ಸ್ವಹಿತ ಸಾಧಕರು ಮಾಡುತ್ತಿದ್ದಾರೆ. ಪಾಲಿಗೆ ಕೃಷಿ ಮಾಡುವವನಿಗೂ, ಶ್ರೀಮಂತ ಭೂ ಮಾಲಕರೊಳಗಿನ ವೈರುಧ್ಯ ಎರಡು ಕಡೆಯ ವರ್ಗ ಸಂಬಂಧವಲ್ಲ; ಆದರೆ ವಾಸ್ತವವಾಗಿ ಮೊದಲನವ ಸಿ. ಪಿ. ಐ. (ಎಂ) ಗೂ, ಎರಡನೆಯವ ಕಾಂಗ್ರೆಸ್ಗೂ ಸೇರಿದವರಾಗಿರುತ್ತಾರೆ.

ಬಡವರು ಬಡವರನ್ನೇ ವಿರೋಧಿ

ಮಾರ್ಕ್ಸಿಸ್ಟರ ಗೂಂಡಾ ಆಡಳಿತೆಗೆ ಇವರು "ಬಲಿಯಾಗಿ"ದ್ದಾರೆಂದು ಸಾರಲಾಗುತ್ತಿದೆ.

ದೇಶದ ಇತರ ಪ್ರದೇಶಗಳಲ್ಲಿಯಂತೆ, ಪಶ್ಚಿಮ ಬಂಗಾಲದಲ್ಲಿ ಕೂಡ ಇಂಥ ಸ್ವಹಿತ ಸಾಧಕರು ಜಾತೀಯ ದ್ವೇಷ ಹುಟ್ಟಿಸಲು ಸಾಕಷ್ಟು ಪ್ರಯತ್ನ ಮಾಡಿದ್ದಾರೆ. ಆದರೆ ಅವರಿಗೆ ಯಶಸ್ಸು ಸಿಗಲಿಲ್ಲ. ಕೆಳಗಿನ ವರ್ಗದ ಜನ ತಂತಮ್ಮೊಳಗೆ ಜಗಳವಾಡುತ್ತಿರಬೇಕು. ಯಾವ ಅಡ್ಡಿಯಿಲ್ಲದೆ ತಮ್ಮ ಹಿತ ಸಾಧನೆಯಾಗುತ್ತಲೇ ಇರಬೇಕೆಂಬ ದುರುದ್ದೇಶದಿಂದ ಗ್ರಾಮಾಂತರ ಪ್ರದೇಶದ ಜನರೊಳಗೆ ಜಗಳ ಹಚ್ಚುವ ಪ್ರಯತ್ನ ಈ ಮೂಲಕ ನಡೆಯುತ್ತಲಿದೆ.

ಮಧ್ಯಮ ವರ್ಗದ ರೈತರು

ವರ್ಗ ಸಮಸ್ಯೆಗಳನ್ನು ಸ್ಥಳೀಯ, ಪಂಥೀಯ ಪಾರ್ಟಿ ಸಮಸ್ಯೆಗಳಧೀನ ಕ್ಕೊಳಪಡಿಸುವಲ್ಲಿ ವಿಫಲಗೊಂಡ ಸ್ವಹಿತಸಾಧಕರು, ರೈತ ಸಮೂಹದ ಮಧ್ಯಮ ವರ್ಗವನ್ನು ಹೇಗಾದರೂ ಮಾಡಿ ತಮ್ಮ ಕಡೆ ಒಲಿಸಿಕೊಳ್ಳಲು ಶತ ಪ್ರಯತ್ನ ನಡೆಸಿದ್ದಾರೆ. ಬಡ ರೈತರನ್ನು ಸಮಾಧಾನಗೊಳಿಸಲು ಎಡರಂಗ ಮಧ್ಯಮ ವರ್ಗದ ರೈತರ

1970ರ ಮೊದಲಿನ 7 ವರ್ಷಗಳನ್ನು ಹಳ್ಳಿಯ ಜನ ಇನ್ನೂ ಮರೆತಿಲ್ಲ. ಆ ಕಾಲದಲ್ಲಿ ಹಳ್ಳಿಗಳಲ್ಲಿ ರಾಕ್ಷಸೀ ದಬ್ಬಾಳಿಕೆ ನಡೆಯಿತು. ವ್ಯಕ್ತಿಸ್ವಾತಂತ್ರ್ಯ, ಪ್ರಜಾಪ್ರಭುತ್ವಗಳು ನಾಶಮಾಡಲ್ಪಟ್ಟವು. ಬಡರೈತರನ್ನಷ್ಟೆ ಅಲ್ಲ ಮಧ್ಯದ ಹಾಗೂ ಒಂದು ವಿಭಾಗದ ಸಿರಿವಂತ ರೈತರನ್ನೂ ಅದು ಬಿಡಲಿಲ್ಲ, ಪಂಚಾಯತಿ ಪದ್ಧತಿಯು ಪ್ರಜಾಪ್ರಭುತ್ವ ಮೌಲ್ಯಗಳನ್ನು ಎತ್ತಿಹಿಡಿದು ಆರ್ಥಿಕ, ಸಾಮಾಜಿಕ, ರಾಜಕೀಯ ಅಧಿಕಾರದ ಕೇಂದ್ರೀಕರಣದ ವಿರುದ್ಧ ಹೋರಾಟ ಮಾಡುವ ಮಟ್ಟಿಗೆ ಮಧ್ಯಮ ವರ್ಗದವರಿಗೂ ಅನುಕೂಲಕರವಾಗಿದೆ.

ಪಂಚಾಯತಿಗಳ ಮುಖಂಡತ್ವದಲ್ಲಿ ಗ್ರಾಮಾಂತರ ಪ್ರದೇಶಗಳ ಅಭಿವೃದ್ಧಿಗಾಗಿ, ಆ ಪ್ರದೇಶದ ಪ್ರಕೃತಿ ಮತ್ತು ಮಾನವನ ಸಂಪನ್ಮೂಲಗಳನ್ನು ಒಟ್ಟುಗೂಡಿಸಿ, ನೀರಾವರಿ ಸೌಲಭ್ಯವನ್ನು ಅಭಿವೃದ್ಧಿಗೊಳಿಸಿ, ಹೊಸ ಬೆಳೆಗಳನ್ನು ಬೆಳೆದು, ಆಧುನಿಕ ಗೊಬ್ಬರ ಇತ್ಯಾದಿಗಳ ಉಪಯೋಗ ವಿಶಾಲಗೊಳಿಸಿದ ಕಾರಣದಿಂದ ಎಲ್ಲ ರೈತ ವರ್ಗಕ್ಕೆ ಲಾಭವಾಗಿದೆ.

ಬ್ಯಾಂಕಿಂಗ್ ಪದ್ಧತಿಯನ್ನು ವಿಸ್ತರಿಸಿ ಸಾಲಕೊಡುವಾಗಿನ ಅನಾವಶ್ಯಕ

ಎಸ್. ಎಫ್. ಐ. ಚಟುವಟಿಕೆಗಳು

ಮಂಗಳೂರು

ಭಾರತ ವಿದ್ಯಾರ್ಥಿ ಫೆಡರೇಶನ್ (ಎಸ್.ಎಫ್.ಐ) ಜಿಲ್ಲಾ ಸಮಿತಿ ವಿಸ್ತೃತ ಸಭೆಯು ಕುಂದಾಪುರದಲ್ಲಿ ನಡೆದು ಹೊಸ ಜಿಲ್ಲಾ ಸಮಿತಿಯನ್ನು ರಚಿಸಲಾಯಿತು.

ಜಿಲ್ಲಾ ಸಮಿತಿ ಅಧ್ಯಕ್ಷರನ್ನಾಗಿ ಕಾ। ವಿಶ್ವನಾಥ್ ರೈ ಹಾಗೂ ಕಾರ್ಯದರ್ಶಿಯನ್ನಾಗಿ ಕಾ। ಬಾಲಕೃಷ್ಣ ಶೆಟ್ಟಿಗಾರ್ ಇವರನ್ನೂ, ಸಮಿತಿ ಸದಸ್ಯರುಗಳಾಗಿ ಕಾ। ಶಿವರಾಂ, ಶಕುಂತಳ, ನಾರಾಯಣಾಚಾರ್, ರತ್ನಾಕರನ್, ಕುಮಾರ್, ಕೆ. ಆಶಾ, ಕೆ. ಸುನಿಲ್, ಕೃಷ್ಣಪ್ಪ ಪೂಜಾರಿ, ಸುನೀಲ್ ನಟೇಕರ್, ಸುದಾನಂದ್, ಬಾಸ್ಕರ ಶೆಟ್ಟಿಗಾರ್, ಹರೀಶ್, ಗಂಗಾಧರ್, ಸೋಮು, ಮೋನಪ್ಪಗೌಡ. ವಿಶ್ವನಾಥ್, ಮೋಹನ್ ಇವರುಗಳನ್ನು ಆಯ್ಕೆ ಮಾಡಲಾಯಿತು.

ಶಾಲಾ ಕಾಲೇಜುಗಳು ಈಗಾಗಲೇ ಆರಂಭವಾಗುತ್ತಲಿದ್ದು, ದಕ್ಷಿಣ ಕನ್ನಡ ಜಿಲ್ಲೆಯ ವಿವಿಧ ಭಾಗಗಳಲ್ಲಿ ಲೇಖಕ್ ನೋಟ್‌ಪುಸ್ತಕಗಳು ವಿದ್ಯಾರ್ಥಿಗಳಿಗೆ ಸಾಕಷ್ಟು ಸಿಗದೆ ಇರುವುದು ತಿಳಿದು ಬಂದಿದೆ. ವಿದ್ಯಾರ್ಥಿಗಳಿಗೆ ಅವಶ್ಯಕವಾದಷ್ಟು ಲೇಖಕ್ ಪುಸ್ತಕವನ್ನು ಕೂಡಲೇ ಜಿಲ್ಲೆಯ ಎಲ್ಲಾ ಭಾಗಗಳಲ್ಲೂ ಒದಗಿಸಲು ಸೂಕ್ತಕ್ರಮ ಕೈಗೊಳ್ಳಬೇಕೆಂದು ಸಂಬಂಧಿತ ಅಧಿಕಾರಿಗಳನ್ನು ಎಸ್.ಎಫ್.ಐ. ಜಿಲ್ಲಾ ಸಮಿತಿ ಒತ್ತಾಯಿಸಿದೆ.

ಲೇಖಕ್ ಪುಸ್ತಕಗಳ ಸರಬರಾಜು ಯಾ ಮಾರಾಟದಲ್ಲಿ ಮೋಸ ವಂಚನೆ ನಡೆಸಿದ್ದಲ್ಲಿ ಜಿಲ್ಲೆಯ ವಿದ್ಯಾರ್ಥಿಗಳಿಂದ ತೀವ್ರ ಹೋರಾಟವನ್ನು ಎದುರಿಸಬೇಕಾಗಬಹುದೆಂದು ಅದು ಎಚ್ಚರಿಕೆ ನೀಡಿದೆ.

ಭಾರತ ವಿದ್ಯಾರ್ಥಿ ಫೆಡರೇಶನ್ ದಕ್ಷಿಣ ಕನ್ನಡ ಜಿಲ್ಲಾ ಸಮಿತಿ ಆಶ್ರಯದಲ್ಲಿ ಕುಂದಾಪುರದಲ್ಲಿ ಎರಡು ದಿನಗಳ ಅಧ್ಯಯನ ಶಿಬಿರವು ನಡೆಯಿತು. ಜಿಲ್ಲೆಯ ವಿವಿಧ ಭಾಗಗಳಿಂದ ಒಟ್ಟು 38ಮಂದಿ ವಿದ್ಯಾರ್ಥಿಗಳು ಇದರಲ್ಲಿ ಭಾಗವಹಿಸಿದರು. ಬಂದಿದ್ದವರಲ್ಲಿ ಹೆಚ್ಚು ಮಂದಿ ಹೈಸ್ಕೂಲ್ ವಿದ್ಯಾರ್ಥಿಗಳು ಎನ್ನುವುದು ಗಮನೀಯವಾಗಿದೆ.

ಈ ಶಿಬಿರದಲ್ಲಿ ಆರ್. ಜಯಕುಮಾರ್ "ಎಸ್.ಎಫ್.ಐ. ಕಾರ್ಯಕ್ರಮಗಳು ಹಾಗೂ ಧ್ಯೇಯಗಳು" ವಿಷಯದ ಮೇಲೆ, ಕೋಟಾ ರಾಮಚಂದ್ರ ಉಡುಪ ಅವರು "ಭಾರತದ ಸ್ವಾತಂತ್ರ್ಯ ಚಳುವಳಿ" ಬಗ್ಗೆ, ಎಸ್. ಆರ್. ಆರಾಧ್ಯ ಅವರು "ಎಸ್‌ಎಫ್ ಐ. ಘೋಷಣೆಗಳು ಹಾಗೂ ಇಂದಿನ ಶಿಕ್ಷಣ ಪದ್ಧತಿ" 'ಮೇಲೆ' ಬಿ. ಮಾಧವ ಅವರು "ಕುಟುಂಬ, ಖಾಸಗಿ ಆಸ್ತಿ, ಪ್ರಭುತ್ವ 'ಹಾಗೂ' ಭಾರತದ ಚರಿತ್ರೆಯ ವೈಜ್ಞಾನಿಕ ವಿಶ್ಲೇಷಣೆ" ಎಂಬೀ ವಿಷಯಗಳ ಬಗ್ಗೆ ತರಗತಿಗಳನ್ನು ನಡೆಸಿದರು.

ಆರಂಭದಲ್ಲಿ ಡಿ.ವೈ.ಎಫ್.ಐ.ಯ ವೆಂಕಟೇಶ್ ಕೋಣಿ ಸ್ವಾಗತಿಸಿದರು.

ಸಮುದಾಯದ ಜಿ. ವಿ. ಕಾರಂತ್ ಶಿಬಿರವನ್ನು ಉದ್ಘಾಟಿಸಿದರು. ಬಾಲಕೃಷ್ಣ ಶೆಟ್ಟಿಗಾರ್ ಧನ್ಯವಾದವಿತ್ತರು. ಭಾರತ ವಿದ್ಯಾರ್ಥಿ ಫೆಡರೇಶನ್ (ಎಸ್.ಎಫ್.ಐ.) ಉಳ್ಳಾಲ ವಲಯ ಸಮಿತಿ ಆಶ್ರಯದಲ್ಲಿ ತೊಕ್ಕೊಟ್ಟಿನಲ್ಲಿ ಸಭೆಯೊಂದು ಜೂನ್ 4ರಂದು ನಡೆಯಿತು. ಈ ಕ್ಷೇತ್ರದ ಆಯ್ದ ಭಾಗಗಳಿಂದ ಈ ಸಭೆಗೆ 23 ವಿದ್ಯಾರ್ಥಿಗಳು ಬಂದಿದ್ದರು.

ಆರಂಭದಲ್ಲಿ ಬಾಲಕೃಷ್ಣ ಶೆಟ್ಟಿಗಾರ್ ಸ್ವಾಗತಿಸಿದರು. ಆರ್. ಜಯಕುಮಾರ್ ಅವರು ಎಸ್.ಎಫ್.ಐ. ಧ್ಯೇಯೋದ್ದೇಶಗಳ ಬಗ್ಗೆ ವಿವರಿಸಿದರು. ಸಂಘಟನೆಯನ್ನು ಬಲಪಡಿಸುವಂತೆ ಕರೆನೀಡಿದ ಬಾಲಕೃಷ್ಣ ಶೆಟ್ಟಿಗಾರ್ ಧನ್ಯವಾದವನ್ನು ನೀಡಿದರು.

ಪುತ್ತೂರು

ಎಸ್. ಎಫ್. ಐ.ಯ ಪುತ್ತೂರು ತಾಲ್ಲೂಕು ಸಮಿತಿಯ ವತಿಯಿಂದ ಜಾತಿ ದೃಢಪತ್ರ, ಆದಾಯ ದೃಢ ಪತ್ರಗಳನ್ನು ಉಚಿತವಾಗಿ ಬರೆದು ಕೊಡುವ ಕಾರ್ಯಕ್ರಮದ ಉದ್ಘಾಟನೆ.ತಾ.3-6-83ರಂದು ಜರುಗಿತು. ಈ ಕಾರ್ಯಕ್ರಮದ ಉದ್ಘಾಟನೆಯನ್ನು ಕಾ। ಬಿ. ರಾಮಕೃಷ್ಣನವರು ಉದ್ಘಾಟಿಸಿದರು. ಇಂದಿನ ವಿದ್ಯಾರ್ಥಿಗಳೇ ನಾಳಿನ ಜವಾಬ್ದಾರಿಯುತ ನಾಗರಿಕರು. ಪ್ರತಿಯೊಬ್ಬ ವಿದ್ಯಾರ್ಥಿಯೂ ಸಾಮಾಜಿಕ ಹೊಣೆಗಾರಿಕೆವುಳ್ಳವನಾಗಿರಬೇಕೆಂದ ಅವರು ಎಸ್.ಎಫ್.ಐ.ಯ ಈ ಕಾರ್ಯಕ್ರಮದಿಂದಾಗಿ ಬಡ ವಿದ್ಯಾರ್ಥಿಗಳು 10-20 ರೂ.ಗಳನ್ನು ಖರ್ಚು ಮಾಡುವುದು ತಪ್ಪಿದಂತಾಗುತ್ತದೆ ಎಂದು ಹೇಳಿ ಎಸ್.ಎಫ್.ಐ. ನ್ನು ವಿದ್ಯಾರ್ಥಿ ಸಮುದಾಯದ ನಡುವೆ ಬಲಿಷ್ಠ ಸಂಘಟನೆಯನ್ನಾಗಿ ಕಟ್ಟುವುದು ಪ್ರತಿಯೊಬ್ಬರ ಕರ್ತವ್ಯವೆಂದರು. ಉಚಿತ ಅರ್ಜಿ ಬರೆದುಕೊಡುವ ಕಾರ್ಯಕ್ರಮದ ನೇತೃತ್ವವನ್ನು ಕಾಮ್ರೇಡ್‌ಗಳಾದ ಪಿ.ವಂ. ವಿಠಲ್, ಸೋಮ, ಕುಕ್ಕಪ್ಪ ವಾಸು, ಮೋನಪ್ಪ ಮೊದಲಾದವರು ವಹಿಸಿದ್ದು, ಪ್ರತಿನಿತ್ಯ ಪುತ್ತೂರು ತಾಲ್ಲೂಕು ಕಚೇರಿಯೆದುರು ಕುಳಿತು ಅರ್ಜಿಗಳನ್ನು ಬರೆದುಕೊಡುತ್ತಿದ್ದರು.

ಎಸ್. ಎಫ್. ಐ. ಯು ಈ ಕೆಳಗಿನ ಬೇಡಿಕೆಗಳನ್ನು ಸರಕಾರವು ಕೂಡಲೇ ಈಡೇರಿಸಬೇಕೆಂದು ಆಗ್ರಹಪಡಿಸಲಾಯಿತು. ಪುತ್ತೂರನ್ನೇ ಕೇಂದ್ರವಾಗಿಟ್ಟುಕೊಂಡು ಬೆಳ್ತಂಗಡಿ, ಸುಳ್ಯ ತಾಲ್ಲೂಕುಗಳ ಹರಿಜನ - ಗಿರಿಜನ ವಿದ್ಯಾರ್ಥಿ /ವಿದ್ಯಾರ್ಥಿನಿಯರಿಗೆ ಕಾಲೇಜು ವಿದ್ಯಾಭ್ಯಾಸ ಪಡೆಯಲು ಅನುಕೂಲವಾಗುವಂತೆ ಪುತ್ತೂರಿನಲ್ಲಿ ವಿದ್ಯಾರ್ಥಿನಿಲಯವೊಂದನ್ನು ಆರಂಭಿಸಬೇಕು. ಇದರಿಂದ ನೂರಾರು ವಿದ್ಯಾರ್ಥಿಗಳಿಗೆ ಹೈಸ್ಕೂಲು ಶಿಕ್ಷಣದ ನಂತರ ಓದು ಮುಂದುವರಿಸಲು ಅನುಕೂಲವಾಗುತ್ತದೆ. ಕಾರ್ಯಕ್ರಮ 3-6-83 ರಿಂದ 13-6-83ರ ತನಕ ನಡೆಯಿತು.

ಚಾಲಹಳ್ಳಿ:

ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನ ಚಾಲಹಳ್ಳಿಯಲ್ಲಿ 11-6-83 ರಂದು ಎಸ್. ಎಫ್. ಐ. ಘಟಕವು ಸಂಘಟಿಸಿದ್ದ ಬೃಹತ್ ಮೆರವಣಿಗೆಯು ಯಶಸ್ವಿಯಾಗಿ ನಡೆಯಿತು

ರಾಯಚೂರು, ಗುಲ್ಬರ್ಗ, ದಾರವಾಡ ಕಾಲೇಜುಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳು ಸ್ಥಳೀಯ ಹೈಸ್ಕೂಲಿನಲ್ಲಿಯ ಸಮಸ್ಯೆಗಳ ಪರಿಹಾರಕ್ಕಾಗಿ ಮೆರವಣಿಗೆ ತೆಗೆದು ಬಹಿರಂಗ ಸಭೆ ನಡೆಸಿದರು.

9ನೇ ತರಗತಿಯಲ್ಲಿ ಓದುತ್ತಿರುವ ಅನಂತ ಶಾಲೆಯಲ್ಲಿ ಮೂರು ವರ್ಷಗಳಿಂದ ಸರಿಯಾಗಿ ಶಿಕ್ಷಕರಿಲ್ಲದೆ ತಮಗಾದ ತೊಂದರೆ ವಿವರಿಸಿದ. ಮತ್ತು ಈಗ ಇಬ್ಬರು ಶಿಕ್ಷಕರು ಮತ್ತು ಒಬ್ಬ ಕಾರಕೂನರನ್ನೂ ಕೂಡಲೆ ಒದಗಿಸಬೇಕೆಂದು ಕೇಳಿಕೊಂಡ.

ರೈತ ಮುಖಂಡ ದೇವೇಂದ್ರ ಪತ್ತಾರ ಮಾತನಾಡಿ ವಿದ್ಯಾರ್ಥಿಗಳ ಬೇಡಿಕೆಗಳ ಈಡೇರಿಕೆಗಾಗಿ ನಡೆವ ಹೋರಾಟಕ್ಕೆ ತಮ್ಮ ಬೆಂಬಲ ಮತ್ತು ಊರ ಪ್ರಮುಖರ ಬೆಂಬಲ ವ್ಯಕ್ತ ಮಾಡಿದರು.

ಕಾಶಿನಾಥ ಹೊಸಮನಿ "ನಮ್ಮ ಬೇಡಿಕೆಗಳು ಶೀಘ್ರದಲ್ಲಿ ಈಡೇರದಿದ್ದರೆ ನಾವು ಖಂಡಿತವಾಗಿಯೂ ಉಗ್ರವಾದ ಹೋರಾಟ ನಡೆಸಬೇಕಾಗುತ್ತದೆ." ಎಂದು ಹೇಳಿದರು.

ಎಚ್. ಲಿಂಗಪ್ಪ ಮಾತನಾಡುತ್ತ "ಸುಮಾರು ನೂರು ವಿದ್ಯಾರ್ಥಿಗಳು ಎಂಟನೆ ತರಗತಿಗೆ ಪ್ರವೇಶ ಬಯಸಿದರೆ 40 ವಿದ್ಯಾರ್ಥಿಗಳಿಗೆ ಮಾತ್ರ ಪ್ರವೇಶ ಕೊಡುತ್ತೇನೆ" ಎಂದ ಮುಖ್ಯೋಪಾಧ್ಯಾಯರ ನಿರ್ಣಯವನ್ನು ಖಂಡಿಸಿ ಎಲ್ಲ ವಿದ್ಯಾರ್ಥಿಗಳಿಗೂ ಪ್ರವೇಶ ಅವಶ್ಯವಾಗಿ ಕೊಡಲೇಬೇಕು, ಎಂದು ಒತ್ತಾಯಿಸಿದ್ದಲ್ಲದೆ ಹೈಸ್ಕೂಲಿಗೆ ಅವಶ್ಯವಿದ್ದ ಶಿಕ್ಷಕರು, ಕಾರಕೂನರೂ ಮತ್ತು ಪಠೋಪಕರಣಗಳಿಗಾಗಿ ಬೇಡಿಕೆ ಈಡೇರುವವರೆಗೆ ಹೋರಾಡುವುದು ಖಂಡಿತವೆಂದು ಹೇಳಿದ ಲಿಂಗಪ್ಪ ಚಲುವಾದಿ ವಂದನಾರ್ಪಣೆ ಸಲ್ಲಿಸಿದ.

ಹೊಸಪೇಟೆ

ಕಮಲಾಪುರದ ಆಶ್ರಮ ಶಾಲೆ ವರ್ಗಾವಣೆ ತಡೆಯನ್ನು ಕುರಿತು ಎಸ್.ಎಫ್.ಐ ನಗರಸಮಿತಿ ಬಿ.ಡಿ.ಓ ಅವರಿಗೆ ಮನವಿ ಅರ್ಪಿಸಿದಾಗ ಬಿಡಿಓ ಅವರು ತಕ್ಷಣ ಸ್ಥಳಕ್ಕೆ ಭೇಟಿಕೊಟ್ಟು ತನಿಖೆ ನಡೆಸುತ್ತೇನೆ, ಎಂದು ತಿಳಿಸಿ ಎಸ್.ಎಫ್.ಐ, ಪ್ರತಿನಿಧಿಗಳನ್ನು ಚರ್ಚೆಗೆ ಆಹ್ವಾನಿಸಿದ್ದಾರೆ.

ಹೊಸಪೇಟೆ ನಗರದಲ್ಲಿ ಕೆಲವು ಶಾಲೆಗಳಲ್ಲಿ ಶಾಲಾಭಿವೃದ್ಧಿಯ ಹೆಸರಿನಲ್ಲಿ ಹಣ ವಸೂಲಿ ಮಾಡುವುದನ್ನು ಎಸ್.ಎಫ್.ಐ ತೀವ್ರವಾಗಿ ಖಂಡಿಸಿದೆ, ಜಾತಿ ಹಾಗೂ ಆದಾಯ ಪ್ರಮಾಣಪತ್ರಗಳನ್ನು ನೀಡುವಲ್ಲಿ ಆಗುವ ಅಧಿಕಾರಿಗಳ ವಿಳಂಬ ನೀತಿಯನ್ನು ಪ್ರತಿಭಟಿಸಲು ಎಸ್.ಎಫ್.ಐ ನಗರಸಮಿತಿ ವಿದ್ಯಾರ್ಥಿಗಳಿಗೆ ಕರೆ ನೀಡಿದೆ.

ಎಸ್. ಎಫ್. ಐ. ರಾಜ್ಯ ಸಮಿತಿ ಸಭೆ

ಜುಲೈ 5 ಮತ್ತು 6ರಂದು ಬೆಂಗಳೂರಿನಲ್ಲಿ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್. ಎಫ್. ಐ.) ಕರ್ನಾಟಕ ರಾಜ್ಯ ಸಮಿತಿ ಸಭೆಯು ಜರುಗುತ್ತದೆ. ಬೆಳಿಗ್ಗೆ 10 ಗಂಟೆಗೆ ಪದಾಧಿಕಾರಿಗಳ ಸಭೆಯು, ಮಧ್ಯಾಹ್ನ 3 ಗಂಟೆಗೆ ರಾಜ್ಯ ಸಮಿತಿ ಸಭೆಯು ಪ್ರಾರಂಭವಾಗುತ್ತದೆ. ಈ ಸಭೆಯಲ್ಲಿ ಎಸ್. ಎಫ್. ಐ. ಅಧ್ಯಕ್ಷರಾದ ಕಾಮ್ರೇಡ್ ಎಂ. ಎ. ಬೇಬಿಯವರು ಭಾಗವಹಿಸುತ್ತಾರೆ. ಈ ಸಭೆಗೆ ಎಲ್ಲಾ ಆಹ್ವಾನಿತರೂ ತಪ್ಪದೆ ಹಾಜರಾಗಬೇಕಾಗಿ ಕೋರಲಾಗಿದೆ.

ರಾಜ್ಯದ ವಿದ್ಯಾರ್ಥಿ ಸಮುದಾಯದ ಜ್ವಲಂತ ಸಮಸ್ಯೆಗಳ ಬಗ್ಗೆ ಸರ್ಕಾರದ ಗಮನ ಸೆಳೆಯಲು ಜುಲೈ 6ರಂದು ಎಸ್. ಎಫ್. ಐ.ರಾಜ್ಯ ಸಮಿತಿಯ ನಿಯೋಗವೊಂದು ಮಾನ್ಯ ಮುಖ್ಯ ಮಂತ್ರಿಗಳನ್ನು ಭೇಟಿ ಮಾಡಲಿದೆ ಎಂದು ಪ್ರಧಾನಕಾರ್ಯದರ್ಶಿ ಎಸ್. ಆರ್. ಆರಾಧ್ಯ ತಿಳಿಸಿದಾರೆ,

ಮೈಸೂರು
'ಐಕ್ಯತಾ ದಿನ' ಆಚರಣೆ

ದಿನಾಂಕ 4-6-1983 ರಂದು ಮೈಸೂರು ಎ್. ಸಿ. ಸಿ. ಘಟಕದ ಆಶ್ರಯದಲ್ಲಿ 'ಕಾರ್ಮಿಕ ವರ್ಗದ ಐಕ್ಯತಾ ದಿನಾಚರಣೆ' ಅಂಗವಾಗಿ ಬಹಿರಂಗ ಸಭೆ ನಡೆಯಿತು. ಕಾರ್ಮಿಕ ಸಂಘಗಳ ರಾಷ್ಟ್ರೀಯ ಆಂದೋಳನ ಸಮಿತಿಯ ಕರೆ ಮೇರೆಗೆ ನಡೆದ ಈ ಸಭೆಯಲ್ಲಿ ಸಿ. ಐ. ಟಿ. ಯು., ಬಿ. ಎಂ. ಎಸ್. ಮತ್ತು ಎಚ್. ಎಂ. ಎಸ್. ಹಾಗೂ ಇತರ ನೌಕರರ ಸಂಘಟನೆಗಳು ಭಾಗವಹಿಸಿದ್ದವು. ಎ. ಐ. ಟಿ. ಯು. ಸಿ. ಭಾಗವಹಿಸಲಿಲ್ಲ. ಬಹಿರಂಗ ಸಭೆಯ ಅಧ್ಯಕ್ಷತೆಯನ್ನು ಜಿಲ್ಲಾ ಸಿ. ಐ. ಟಿ. ಯು. ಅಧ್ಯಕ್ಷರಾದ ಕಾ। ಎಂ. ಎನ್. ಉಗ್ರಪ್ಪ ವಹಿಸಿದ್ದರು. ಸಿ. ಐ. ಟಿ. ಯು. ಪರವಾಗಿ ಜಿಲ್ಲಾ ಕಾರ್ಯದರ್ಶಿ ಕಾ। ಮೋಹನ್‌ಕುಮಾರ್ ಅವರು ಮಾತನಾಡಿ ವಿಶಾಲ ಐಕ್ಯತೆಯ ಮೇಲೆ ರಚನೆಯಾದ ರಾಷ್ಟ್ರೀಯ ಆಂದೋಳನ ಸಮಿತಿ ನೇತೃತ್ವದಲ್ಲಿ ನಡೆದ ಹೋರಾಟಗಳು-ಚಳುವಳಿಗಳನ್ನು ವಿವರಿಸಿ ಬರಲಿರುವ ದಿನಗಳಲ್ಲಿ ಸರ್ಕಾರ ಕಾರ್ಮಿಕ ವರ್ಗದ ಮೇಲೆ ನಡೆಸಲಿರುವ ತೀವ್ರ ದಬ್ಬಾಳಿಕೆಗಳನ್ನು ಎದುರಿಸಲು ಐಕ್ಯ ಹೋರಾಟವನ್ನು ಇನ್ನಷ್ಟು ಬಲಪಡಿಸಬೇಕಾಗಿದೆ ಎಂದು ಹೇಳಿದರು.

ವಿಶ್ವನಾಥರಾವ್, ಸಿದ್ದಪ್ಪಗೌಡ (ಬಿ. ಎಂ. ಎಸ್.), ಚಿಕ್ಕಣ್ಣ (ಎಚ್. ಎಂ. ಎಸ್.) ಮುಂತಾದವರು ಸಭೆಯಲ್ಲಿ ಮಾತನಾಡಿದರು. ಜಿಲ್ಲಾ ಸಿ.ಐ.ಟಿ.ಯು. ಉಪಾಧ್ಯಕ್ಷ ಕಾ। ಸಿ. ಕೆ. ಮೋನ್ ವಂದನಾರ್ಪಣೆ ಮಾಡಿದರು.

ತಾ॥ 30-5-83ರಂದು ಮೈಸೂರಿನ ಅಶೋಕಪುರಂ ಕಮ್ಯೂನಿಟಿ ಹಾಲ್‌ನಲ್ಲಿ ಸಿ. ಐ. ಟಿ. ಯು.ಗೆ ಸೇರಿದ ಕಾರ್ಮಿಕರ ಸಭೆ ಸೇರಿ 'ಸಿ. ಐ. ಟಿ. ಯು. ಸ್ಥಾಪನಾ ದಿನ' ಹಾಗೂ ಅಸ್ಸಾಂ ದಿನವನ್ನಾಗಿ ಆಚರಿಸಲಾಯಿತು. ಈ ಸಭೆಯಲ್ಲಿ ಕಾ। ಎಂ. ಎನ್. ಉಗ್ರಪ್ಪ ಹಾಗೂ ಕಾ। ಮೋಹನ್‌ಕುಮಾರ್‌ರವರು ಮಾತನಾಡಿ ಈ ಕಾರ್ಯಕ್ರಮದ ಮಹತ್ವವನ್ನು ವಿವರಿಸಿದರು.

ಆಟೋ ಚಾಲಕರ ಮುಷ್ಕರ

ಆಟೋರಿಕ್ಷಾ ಚಾಲಕರ ಸಂಘದ ನೇತೃತ್ವದಲ್ಲಿ 20-6-83ರ ಬೆಳಿಗ್ಗೆ 11-00ಘಂಟೆಗೆ ನೂರಾರು ಆಟೋರಿಕ್ಷಾ ಚಾಲಕರು, ತಮ್ಮ ಬೇಡಿಕೆಗಳನ್ನು ಒತ್ತಾಯಿಸಿ ಜಿಲ್ಲಾಧಿಕಾರಿಗಳ ಕಛೇರಿ ಮುಂದೆ ಪ್ರದರ್ಶನ ನಡೆಸಿ ಬೇಡಿಕೆಗಳ ಪತ್ರವನ್ನು ಜಿಲ್ಲಾಧಿಕಾರಿಗಳಿಗೆ ನೀಡಿದರು.

ಕೆಲವು ಮುಖ್ಯ ಬೇಡಿಕೆಗಳು :

1) ಆರ್.ಟಿ.ಓ, ಕಛೇರಿಯಲ್ಲಿ ರಾಷ್ಟ್ರೀಯ ಉಳಿತಾಯ ಯೋಜನಾ ಪತ್ರವನ್ನು ಪಡೆಯಬೇಕೆಂದು ಆಟೋಚಾಲಕರ ಮೇಲೆ ಖಡ್ಡಾಯವಾಗಿ ಹೇರುವುದನ್ನು ನಿಲ್ಲಿಸಬೇಕು.

2) ಆರ್.ಟಿ.ಓ. ಹೊಸ ಕಾಯ್ದೆ ಮತ್ತು ನೀತಿಗಳನ್ನು ಆಟೋರಿಕ್ಷಾ ಚಾಲಕರ ಮೇಲೆ ಜಾರಿಗೊಳಿಸುವುದಕ್ಕೆ ಮುಂಚೆ ಸಂಘದೊಡನೆ ಒಪ್ಪಂದ ಮಾಡಿಕೊಳ್ಳಬೇಕು.

3) ಹಾಲಿ ನಗರದಲ್ಲಿ ಸುಮಾರು ಹತ್ತು ಸಾವಿರಕ್ಕೂ ಹೆಚ್ಚು ಆಟೋರಿಕ್ಷಾಗಳು ಇದ್ದು. ಸಂಚಾರ ಮತ್ತು ಚಾಲಕರ ಜೀವನದ ಹಿತ ದೃಷ್ಟಿಯಿಂದ ಮಿತಿಗೊಳಿಸಿ ಹೊಸ ಪರ್ಮಿಟ್‌ಗಳನ್ನು ನೀಡುವುದನ್ನು ನಿಲ್ಲಿಸಬೇಕು.

4) ಸಣ್ಣ ಪುಟ್ಟ ಅಪರಾಧಗಳಿಗೆ ಕೋರ್ಟುಗಳಲ್ಲಿ ಮಿತಿಮೀರಿ ದಂಡ ಹಾಕುವುದನ್ನು ಸರ್ಕಾರ ಕರುಣೆಯಿಂದ ಪರಿಶೀಲಿಸಿ ಮಿತಿಗೊಳಿಸಬೇಕು. ಮತ್ತು ಇತರ ಕೆಲವು ಬೇಡಿಕೆಗಳನ್ನೊಳಗೊಂಡ ಬೇಡಿಕೆ ಪತ್ರವನ್ನು ಸಂಘದ ಅಧ್ಯಕ್ಷ ಕಾ। ಕೆ. ಆರ್. ವೆಂಕಟೇಶ್‌ಗೌಡ, ಉಪಾಧ್ಯಕ್ಷರುಗಳಾದ ಕಾ। ಪಿ.ಕೆ. ಸುಬ್ರಮಣಿ, ಕಾ। ಜಿ. ಸುಬ್ಬರಾವ್ ಮತ್ತು ಪ್ರಧಾನ ಕಾರ್ಯದರ್ಶಿ ಕಾ। ಎ. ವಿ. ರಮೇಶ್ ಅವರನ್ನೊಳಗೊಂಡ ನಿಯೋಗ ನೀಡಿದೆ. ಸಮಸ್ಯೆಗಳನ್ನು ಚರ್ಚಿಸಿ ಬಗೆಹರಿಸಲು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಚರ್ಚಿಸಲು ಮುಂದೆ ದಿನ ಗೊತ್ತುಪಡಿಸುವುದಾಗಿ ನಿಯೋಗಕ್ಕೆ ಭರವಸೆ ನೀಡಲಾಯಿತು.

ಪಶ್ಚಿಮಬಂಗಾಲದಲ್ಲಿ ಪಂಚಾಯತ್: ರಾಜ್ಯದ ಅನುಭವ

(5ನೇ ಪುಟದಿಂದ)

ಭ್ರಷ್ಟಾಚಾರದ ಆರೋಪಗಳು ಬಂದಾಗಲೆಲ್ಲ ಎಡರಂಗದ ಅತಿದೊಡ್ಡ ಘಟಕವಾದ ಸಿ. ಪಿ. ಐ. (ಎಂ) ಪಕ್ಷವು ಕೂಡಲೇ ಚಾಕಶಿಗೆ ಆಜ್ಞೆ ಹೊರಡಿಸಿ, ಶಿಸ್ತಿನ ಕ್ರಮವನ್ನು ತೆಗೆದುಕೊಂಡಿದೆ. ಭ್ರಷ್ಟಾಚಾರದಲ್ಲಿ ಯಾವ ತರದ ಒಪ್ಪಂದವೂ ಇಲ್ಲ. ಅದರ ಕುರಿತು ಸಿ. ಪಿ. ಐ. (ಎಂ) ಪಕ್ಷ ಬಹಳ ನಿಷ್ಠೂರವಾಗಿಯೇ ವರ್ತಿಸಿದೆ. ಇಂದಿನ ತನಕ ಸಾಧಾರಣ 400 ಪಂಚಾಯತ್ ಸದಸ್ಯರನ್ನು ಪಾರ್ಟಿಯಿಂದ ಹೊರಗೆ ಹಾಕಲಾಗಿದೆ. ಅವರನ್ನು ಪಂಚಾಯತಿಯಲ್ಲಿದ್ದ ಅಧಿಕಾರ ಸ್ಥಾನಗಳಿಂದ ಕಡಿಮೆ ಮಾಡಲಾಗಿದೆ. ಹಾಗೆಯೇ ಯಾರ ಮೇಲೆ ಆರೋಪಗಳಿವೆಯೋ ಅಂಥವರಿಗೆ ಈ ಚುನಾವಣೆಯಲ್ಲಿ ಸ್ಪರ್ಧಿಸಲು ನಿರಾಕರಿಸಲಾಗಿದೆ. 56,000 ಪಂಚಾಯತ್ ಸದಸ್ಯರಲ್ಲಿ 400 ಬಹಳ ಸಣ್ಣ ಸಂಖ್ಯೆ ಶೇ ಒಂದಕ್ಕಿಂತಲೂ ಕಡಿಮೆ.

ಕಾಂಗ್ರೆಸ್ಸಿನ ದಾಖಲೆ ಏನು ?

ಭ್ರಷ್ಟಾಚಾರದ ವಿಷಯದಲ್ಲಿ ಸಿ. ಪಿ. ಐ. (ಎಂ) ಯಾವುದೇ ತರದ ಒಪ್ಪಂದ ಮಾಡಿಕೊಳ್ಳದಿದ್ದರೂ ಕೂಡ, ಇದರ ಕುರಿತು ಗುತ್ತೇದಾರಿ ಪತ್ರಿಕೆಗಳಲ್ಲಿ ಬಹಳಷ್ಟು ಪ್ರಚಾರ ಮಾಡುತ್ತಿರುವ ಕಾಂಗ್ರೆಸ್ ಮತ್ತು ಇತರ ಬಂಡವಾಳ ಶಾಹಿ ಪಕ್ಷಗಳ ದಾಖಲೆ ಏನು ?

ಸರ್ವ ಸಾಧಾರಣವಾಗಿ ಪಂಚಾಯತಿಯನ್ನು ಎಡರಂಗಕ್ಕೆ ಹೋಲಿಸಿದರೂ ಕೂಡ, ಪಂಚಾಯತಿಗಳಲ್ಲಿ ಒಂದು ಮೂರಾಂಶ ಸದಸ್ಯರು ಕಾಂಗ್ರೆಸ್, ಜನತಾ ಪಾರ್ಟಿ, ಇತರ ಬಂಡವಾಳ ಶಾಹಿ ಪಕ್ಷಗಳು ಅಥವಾ ಸ್ವತಂತ್ರರಿದ್ದಾರೆ. ಎಂಬುದನ್ನು ಯಾರೂ ಗಮನಿಸುವುದಿಲ್ಲ. ಭ್ರಷ್ಟಾಚಾರದ ವಿರುದ್ಧ ಹೋರಾಟದಲ್ಲಿ ಇವರ ಪಾತ್ರವೇನು? ಇವರೆಲ್ಲ ಯಾರಾದರೊಬ್ಬರನ್ನು ಭ್ರಷ್ಟಾಚಾರದ ಆರೋಪದ ಮೇಲೆ ಪಾರ್ಟಿಯಿಂದ ಹೊರಗೆ ಹಾಕಿದ್ದಾರೆಯೇ ? ಲಂಚಗುಳಿತನದ ಆರೋಪದ ಮೇಲೆ ಇವರು ಯಾರನ್ನಾದರೂ ಪಂಚಾಯತಿ ಸದಸ್ಯತ್ವದಿಂದಾಗಲೀ ಮುಖಂಡತ್ವದಿಂದಾಗಲೀ ತೆಗೆದು ಹಾಕಿದ್ದಾರೆಯೇ? ಇದಕ್ಕೆ ಉತ್ತರ "ಇಲ್ಲ" ವೆಂಬುದಾಗಿದೆ. ಪಶ್ಚಿಮ ಬಂಗಾಲದ ಕಾಂಗ್ರೆಸ್ ಭ್ರಷ್ಟಾಚಾರದಿಂದ ತುಂಬಿ ತುಳುಕುತ್ತಿದೆ. ಪಂಚಾಯತಿಯಲ್ಲಾಗಲೀ ಅಥವಾ ಬೇರೆಡೆಯಾಗಲೀ ಇಂಥ ಪಾರ್ಟಿ ಭ್ರಷ್ಟಾಚಾರದ ವಿರುದ್ಧ ಹೋರಾಡುತ್ತದೆಂದು ಅಪೇಕ್ಷಿಸುವುದು ಒಂದು ಚಮತ್ಕಾರವೇ ಸರಿ. ಗಾಜಿನ ಮನೆಯಲ್ಲಿರುವ ಕಾಂಗ್ರೆಸ್ಸಿನವರು ಭ್ರಷ್ಟಾಚಾರದ ಪ್ರಶ್ನೆಯನ್ನೆತ್ತುವ ಧೈರ್ಯ ತೋರಿಸಿರುವುದು ಆಶ್ಚರ್ಯಕರ.

ಪಶ್ಚಿಮ ಬಂಗಾಲದಲ್ಲಿ ಪಂಚಾಯತ್ ರಾಜ್ಯ ಎದುರಿಸುತ್ತಿರುವ ಕೆಲವು ಸಮಸ್ಯೆಗಳನ್ನೂ, ಪಟ್ಟಭದ್ರ ಹಿತಾಶಕ್ತಿಗಳು ಯಾವ ರೀತಿ ಅಪಪ್ರಚಾರ ಮಾಡಿ ಮತ್ತೆ ಅಧಿಕಾರಕ್ಕೆ ಬರಲು ಪ್ರಯತ್ನ ನಡೆಸುತ್ತಿವೆಂಬುದನ್ನೂ ಇಲ್ಲಿ ವಿವರಿಸಲಾಗಿದೆ. ಈ ಪಕ್ಷಗಳ, ಶಕ್ತಿಗಳ ಆಹ್ವಾನವನ್ನು ಸ್ವೀಕಾರಮಾಡಿ, ಪ. ಬಂಗಾಲದಲ್ಲಿ ಪಂಚಾಯೆತ್ ರಾಜ್ಯ ಪದ್ಧತಿ ಉಳಿದಿದೆ ಅಷ್ಟೇ ಅಲ್ಲ ಅಂಥ ಹಿತಾಶಕ್ತಿಗಳ ವಿರುದ್ಧ ಹೋರಾಡಿ ಮತ್ತಷ್ಟು ಬಲಶಾಲಿಯಾಗಿದೆ.

ಬಲಪಂಥಿಯರಿಗೆ ಗ್ರಾಸ

(2ನೇ ಪುಟದಿಂದ)

ರಿಸಲಾಗುವುದು ಎಂದು ಎಚ್ಚರಿಕೆ ನೀಡಿದೆ.

ಅದೇ ಸಮಯದಲ್ಲಿ ಪ್ರತಿಯೊಂದು ಹೋರಾಟವನ್ನು ಅಧ್ಯಾಪಕರ ಮನೆಗಳ ಘೇರಾವೋದಿಂದ ಆರಂಭಿಸಿ, ಆಡಳಿತ ಮಂಡಳಿಯ ಘೇರಾವೋದೊಂದಿಗೆ ಮುಗಿಸುವ ಹುಂಬ ಸಮರಶೀಲ, ಅರಾಜಕ ಪ್ರವೃತ್ತಿಯನ್ನು ತಿರಸ್ಕರಿಸಬೇಕೆಂದು ವಿದ್ಯಾರ್ಥಿಗಳನ್ನು ಎಸ್. ಎಫ್. ಐ. ವಿನಂತಿಸಿದೆ ಅದೇ ರೀತಿ ವಿದ್ಯಾರ್ಥಿಗಳ ಪ್ರತಿಯೊಂದು ಬೇಡಿಕೆಯನ್ನು ವಿರೋಧಿಸುವ ಕೆಲವು ಅಧ್ಯಾಪಕರೂ ತಮ್ಮ ಈ ಪ್ರವೃತ್ತಿಯನ್ನು ತ್ಯಜಿಸಬೇಕೆಂದು ಒತ್ತಾಯಿಸಿದೆ. ಆಳುವ ವರ್ಗಗಳು ಎಲ್ಲಾ ಜನಪರ ಚಳವಳಿಗಳನ್ನು ದಿಕ್ಕುಗೆಡಿಸಲು ಪ್ರಯತ್ನಿಸುವಂತೆ ಬಲಿಷ್ಠ ವಿದ್ಯಾರ್ಥಿ ಚಳುವಳಿಯನ್ನೂ ದಿಕ್ಕುಗೆಡಿಸಲು ಪ್ರಯತ್ನಿಸುತ್ತಿವೆ. ವಿದ್ಯಾರ್ಥಿಗಳನ್ನು ಅಧ್ಯಾಪಕರ ವಿರುದ್ಧ ಎತ್ತಿಕಟ್ಟುವ ಹೋರಾಟಕ್ಕಿಳಿಯುವುದೆಂದರೆ ಆಳುವ ವರ್ಗಗಳು ಒಡ್ಡಿದ ಬಲೆಗೆ ಬಿದ್ದಂತೆಯೇ ಎಂಬುದನ್ನು ವಿದ್ಯಾರ್ಥಿ ನಾಯಕರು ತಿಳಿಯಬೇಕು.

ಕುದುರೆಮುಖ ಆಡಳಿತ ಮಂಡಳಿಯ ಕ್ರಮಕ್ಕೆ ಖಂಡನೆ

[ಸಿ.ಐ.ಟಿ.ಯು. ಕರ್ನಾಟಕ ರಾಜ್ಯ ಸಮಿತಿಯ ಪ್ರಧಾನ ಕಾರ್ಯದರ್ಶಿ ಸಿ. ನಂಜುಂಡಪ್ಪನವರು ಈ ಪತ್ರಿಕಾ ಪ್ರಕಟಣೆಯನ್ನು ಕೊಟ್ಟಿರುತ್ತಾರೆ.]

ಭಾರತದ ಅತ್ಯಂತ ದೊಡ್ಡ ಕಬ್ಬಿಣದ ಗಣಿಯಾದ ಕುದುರೆ ಮುಖದಲ್ಲಿ ಸುಮಾರು 7-8 ವರ್ಷಗಳಿಂದ ಈ ಗಣಿಯು ಸುಂದರ ನಗರವನ್ನಾಗಿ ನಿರ್ಮಾಣ ಗೊಳಿಸುವ ಮತ್ತು ಗಣಿಗೆ ಸಂಬಂಧಪಟ್ಟಂತೆ ಕಂಟ್ರಾಕ್ಟ ಕೆಲಸದ ಆಧಾರದ ಮೇಲೆ ಸಾವಿರಾರು ಜನ ಕಾರ್ಮಿಕರು ದುಡಿಯುತ್ತಿದ್ದರು.

ಆಗ ಅವರಿಗೇ ಆಗಿ ಒಂದು ಕಾಲೋನಿ ನಿರ್ಮಾಣವಾಗಿ ಸಣ್ಣ, ಸಣ್ಣ ಜೋಪಡಿ ಹಾಗೂ ಮನೆಗಳನ್ನು ಕಟ್ಟಿಕೊಂಡು ಕೂಲಿ ಮಾಡಿ ಜೀವಿಸುತ್ತಿದ್ದರು. ಕೆ. ಐ. ಓ. ಸಿ.ಎಲ್. ಆಡಳಿತ ಮಂಡಳಿಯು ಹಿಂದೆ 1975, 77, 78 ರಲ್ಲಿ ಅದಿರುಯೋಜನೆಯ ಕೆಲಸಗಳಲ್ಲಿ ದುಡಿದಿದ್ದ ದುಡಿಮೆಗಾರರನ್ನು ಅವರು ವಾಸ ಮಾಡುತ್ತಿದ್ದ ಕಾಲೋನಿಯಿಂದ ಒಂದು ಕಡೆಯಿಂದ ಮತ್ತೊಂದು ಕಡೆಗೆ ಮೂರು ಭಾರಿ ಸ್ಥಳಾಂತರ ಮಾಡಿಸಿದ್ದಾರೆ. ನೀರು ಮತ್ತು ವಿದ್ಯುಚ್ಛಕ್ತಿ ಸರಬರಾಜನ್ನು ನಿಲ್ಲಿಸಿರುತ್ತಾರೆ. ಕಾರ್ಮಿಕರು ಒಗ್ಗಟ್ಟಾಗಿ ಲೇಬರ್ ಕಾಲೋನಿ ಕಾರ್ಮಿಕರ ಸಂಘವನ್ನು ಕಟ್ಟಿದರು. ಇದನ್ನು ಗಮನಿಸಿ ಈ ಲೇಬರ್ ಕಾಲೋನಿಯಲ್ಲಿ ವಾಪಾರ ಮಾಡಿಕೊಂಡು ವಾಸವಾಗಿದ್ದ ಸುಮಾರು 14 ಜನಗಳಿಗೆ ನೋಟೀಸ್ ಕೊಟ್ಟು ತಾ 30-6-83 ರೊಳಗೆ ಜಾಗವನ್ನು ಖಾಲಿ ಮಾಡಿಸಿಕೊಡಬೇಕೆಂದು ಕುದುರೆಮುಖದ ಆಡಳಿತ ಮಂಡಳಿ ಸೂಚನೆ ನೀಡಿದೆ. ಇದು ಅಲ್ಲಿಯ ಕಾರ್ಮಿಕರ ಸಂಘಟನೆಯನ್ನು ಮುರಿಯುವ ಪ್ರಯತ್ನವಾಗಿದ್ದು, ಕಾರ್ಮಿಕ ವಿರೋಧಿ ನೀತಿಯಾಗಿದೆ.

ಆದುದರಿಂದ ಲೇಬರ್ ಕಾಲೋನಿಯಲ್ಲಿ ವಾಸಿಸುತ್ತಿರುವ ಜನರನ್ನು ಅಲ್ಲಿಯೇ ವಾಸಿಸಲು ಬಿಡಬೇಕೆಂದೂ, ಅವರ ಗೋಜಿಗೆ ಹೋಗಕೂಡದೆಂದೂ ಸಿ. ಐ. ಟಿ. ಯು. ಕರ್ನಾಟಕ ರಾಜ್ಯ ಸಮಿತಿಯ ಪ್ರಧಾನ ಕಾರ್ಯದರ್ಶಿ ಸಿ. ನಂಜುಂಡಪ್ಪನವರು ಕುದುರೆ ಮುಖ ಕಬ್ಬಿಣ ಅದುರಿನ ಕಂಪನಿಯ (ಕೆ. ಐ. ಓ. ಸಿ. ಎಲ್.) ಆಡಳಿತ ಮಂಡಳಿಯನ್ನು ಆಗ್ರಹಪಡಿಸುತಾರೆ.

ಐಕ್ಯರಂಗಕ್ಕೆ ಚಂದಾದಾರರಾಗಿರಿ

ಜನತಾ ಸರ್ಕಾರದ ಕಾರ್ಮಿಕ ನೀತಿ

(3ನೇ ಪುಟದಿಂದ)

ದುರುದ್ದೇಶದಿಂದ ಮಾಲಿಕ ವರ್ಗ ಕಾರ್ಖಾನೆ ಬಂದು ಮಾಡಿ ಕಾರ್ಮಿಕರು ಉಪವಾಸ ಬೀಳುವಂತೆ ಮಾಡಿದೆ. ಕಾರ್ಮಿಕರ ಶ್ರಮದಿಂದ ಅಪಾರ ಲಾಭ ಗಳಿಸಿರುವ ಮಾಲಿಕರು ಇನ್ನೂ ಕೆಲವು ತಿಂಗಳು ಕಾರ್ಖಾನೆಯನ್ನು ತೆರೆಯದೇ ಇರಬಹುದು. ಆದರೆ ಕಾರ್ಮಿಕರ ಪರಿಸ್ಥಿತಿ ಎಷ್ಟು ಭೀಕರ. ಅತ್ಯಂತ ಶಾಂತ ರೀತಿಯಾದ ಚಳುವಳಿ ನಡೆಯುತ್ತಿದೆ. ಸರ್ಕಾರ ಮಧ್ಯೆ ಪ್ರವೇಶಿಸಿ, ಮಾಲಿಕರ ಮೇಲೆ ಒತ್ತಾಯ ತಂದು ಸಮಸ್ಯೆ ಬಗೆಹರಿಸುತ್ತಿಲ್ಲ. ಕೊನೆಗೆ ಕಾರ್ಮಿಕರು ಬೇಸತ್ತು ತಾವು ಬದುಕಿ ಉಳಿಯುವ ಸಲುವಾಗಿ 'ಬೇರೆ' ದಾರಿ ಹಿಡಿದರೆ "ಹಿಂಸಾಚಾರದ" ಆರೋಪ ಹೊರಿಸಲಾಗುತ್ತಿದೆ. ಲೇಬರ್ ಕಮೀಷನರ್, ಕಾರ್ಮಿಕ ಮಂತ್ರಿಯವರು ಕರೆದರೂ ಕೂಡ ಚರ್ಚೆಗೆ ಬಾರದ ಮಾಲಿಕನನ್ನು 'ದಾರಿಗೆ' ತರಲು ಸರಕಾರದ ಹತ್ತಿರ ಸಾಕಷ್ಟು ಶಸ್ತ್ರಗಳಿವೆ. ಆದರೆ ಸರಕಾರ ಅಂಥ ಅಸ್ತ್ರಗಳನ್ನು ಉಪಯೋಗಿಸುತ್ತಿಲ್ಲ. ಆದ್ದರಿಂದ ಈ ಕಾರ್ಖಾನೆಯ ಕಾರ್ಮಿಕರೆಲ್ಲ ಜೈಲ್ ಭರೋ ಕಾರ್ಯಕ್ರಮ ಹಾಕಿಕೊಂಡಿರುವುದರಲ್ಲಿ ತಪ್ಪೇ ಇಲ್ಲ. ಎಲ್ಲರೂ ಈ ಚಳುವಳಿಗೆ ಬೆಂಬಲ ನೀಡುವುದು ಅತ್ಯಗತ್ಯ.

ಇದರಂತೆಯೇ ಪೈಕೋ. ಐಟಿಸಿ ಯೂನಿಯನ್ನುಗಳಿಗೆ ಮಾಲಕ ವರ್ಗ ಮಾನ್ಯತೆ ನೀಡಿದೆ. ಶೇ. 90ರಷ್ಟು ಕಾರ್ಮಿಕರು ಈ ಎರಡೂ ಯೂನಿಯನ್‌ಗಳಲ್ಲಿ ಸಿಐಟಿಯು ಅಧ್ಯಕ್ಷ ಸೂರ್ಯನಾರಾಯಣರಾವ್ ಅವರನ್ನು ಅಧ್ಯಕ್ಷರನ್ನಾಗಿ ಮಾಡಿದ್ದಾರೆ. ಮಾಲಕರು ಎಫ್. ಎಂ. ಖಾನ್ ಮತ್ತು ಎ. ಕೆ. ಸುಬ್ಬಯ್ಯನವರನ್ನು ಅಧ್ಯಕ್ಷರನ್ನಾಗಿ ಮಾಡಿಕೊಂಡಿದ್ದಾರೆ. ಸರಕಾರಕ್ಕೆ ಈ ಸಂಗತಿಗೊತ್ತು. ಆದರೆ ಮ್ಯಾನೇಜ್‌ಮೆಂಟಿನವರು ನಕಲಿ ಅಧ್ಯಕ್ಷರ ಜೊತೆಯಲ್ಲಿ ಒಪ್ಪಂದ ಮಾಡಿಕೊಳ್ಳುವುದನ್ನು, ಬಹುಸಂಖ್ಯ ಕಾರ್ಮಿಕರ ಮುಖಂಡರ ಜೊತೆಯಲ್ಲಿ ಚರ್ಚೆ ಮಾಡಲು ಮುಂದೆ ಬಾರದಿರುವುದನ್ನು ಸರಿಪಡಿಸುವ ಶಕ್ತಿ ಜನತಾ ಸರಕಾರಕ್ಕಿಲ್ಲ. ಇದು ಅತ್ಯಂತ ಅವಹೇಳನದ ಸಂಗತಿ. ಕಾರ್ಮಿಕರ ಐಕ್ಯತೆಯನ್ನು ಮುರಿಯುವ ಮಾಲಕ ವರ್ಗಕ್ಕೆ ಸಹಾಯ ಮಾಡುವ ಸರಕಾರದ ಈ ನೀತಿ ವಿರುದ್ಧ ಬಲಿಷ್ಠವಾದ ಹೋರಾಟ ಮಾಡುವುದು ಅತ್ಯಗತ್ಯ. ಹೋರಾಟವೇ ಕಾರ್ಮಿಕರ ಶಕ್ತಿ, ಐಕ್ಯತೆಯೇ ಅವರ ಬೆನ್ನೆಲುಬು. ಇವುಗಳನ್ನು ಪಯೋಗಿಸಿ ಸರಕಾರವು ಮಾಲಕರ ನೀತಿಯನ್ನು ಬದಲಾಯಿಸಲು ಹೋರಾಡೋಣ.

ಪ್ಲಾಂಟೇಷನ್ ವರ್ಕರ್ಸ್ ಯೂನಿಯನ್‌ನ ಸರ್ವಸದಸ್ಯರ ಸಭೆ

ಜೂನ್ 8 ಮತ್ತು 9 ರಂದು ಮೂಡಿಗೆರೆಯಲ್ಲಿ ನಡೆದ ಕರ್ನಾಟಕ ಪ್ರೋವಿನ್ಸಿಯಲ್ ಪ್ಲಾಂಟೇಷನ್ ವರ್ಕರ್ಸ್ ಯೂನಿಯನ್ನಿನ ಜನರಲ್ ಬಾಡಿ ಸಭೆಯು ದೇಶದ ಸ್ವಾತಂತ್ರ್ಯಕ್ಕಾಗಿ, ದುಡಿಯುವ ಜನತೆಯ ಏಳಿಗೆಗಾಗಿ ಜೀವನವಿಡೀ ದುಡಿದು ಕಳೆದ ಮೇ 23 ರಂದು ನಿಧನರಾದ ಸಿಪಿಐ (ಎಂ) ಕೇಂದ್ರ ಸಮಿತಿ ಸದಸ್ಯ ಕಾ. ಎಂ. ಆರ್. ವೆಂಕಟರಾಮನ್‌ರವರಿಗೆ ಶ್ರದ್ಧಾಂಜಲಿಯನ್ನರ್ಪಿಸಿತು.

ಬೆಲೆ ಏರಿಕೆಯನ್ನು ತಡೆಯಲು ತುರ್ತು ಕ್ರಮಗಳನ್ನು ತೆಗೆದುಕೊಳ್ಳಬೇಕು ದಿನ ಬಳಕೆಯ ವಸ್ತುಗಳನ್ನು ಜನತೆಯ ಸಮಿತಿಗಳ ಮೇಲ್ವಿಚಾರಣೆಯಲ್ಲಿರುವ ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮೂಲಕ ಪೇಟೆಗಳಲ್ಲಿ, ಹಳ್ಳಿಗಳಲ್ಲಿ ಮತ್ತು ತೋಟಗಳಲ್ಲಿ ಸಕಾಲದಲ್ಲಿ ನಿಗದಿಯಾದ ಬೆಲೆಗಳಿಗೆ ಒದಗಿಸುವ ವ್ಯವಸ್ಥೆಯನ್ನು ಸಮರ್ಪಕವಾಗಿ ಮಾಡಬೇಕೆಂದೂ, ಪೇಟೆಗಳಲ್ಲಿ ಮತ್ತು ಗ್ರಾಮಗಳಲ್ಲಿರುವ ನಿರುದ್ಯೋಗಿಗಳಿಗೆ ಉದ್ಯೋಗವನ್ನು ಒದಗಿಸಬೇಕು, ಕೆಲಸ ಕೊಡುವವರೆಗೆ ನಿರುದ್ಯೋಗ ಭತ್ತೆಯನ್ನು ಕೊಡಬೇಕೆಂದೂ, ಕೇಳುವ ಠರಾವನ್ನು ಸಭೆಯು ಅಂಗೀಕರಿಸಿತು.

ಕಳೆದ ಹತ್ತು ವರ್ಷಗಳಿಂದ ದೇಶದ ಪ್ಲಾಂಟೇಷನ್ ಕಾರ್ಮಿಕರು ಕೇಳುತ್ತಾ ಬಂದುದರ ಪರಿಣಾಮವಾಗಿ ಕೇಂದ್ರ ಸರ್ಕಾರವು ಕಳೆದ ವರ್ಷ ಪ್ಲಾಂಟೇಷನ್ ಕುರಿತಾದ ಕೈಗಾರಿಕಾ ಸಮಿತಿಯನ್ನು ಪುನರುತ್ಥಾನಗೊಳಿಸಿತು. ಮೂರು ತಿಂಗಳ ಹಿಂದೆ ಕೇಂದ್ರ ಸರ್ಕಾರದ ಕಾರ್ಮಿಕ ಇಲಾಖೆಯು ಏಕಪಕ್ಷೀಯವಾಗಿ, ನಿಷ್ಕಾರಣವಾಗಿ ಸಮಿತಿಯಲ್ಲಿ ಸಿಐಟಿಯುಗೆ ಇದ್ದ ಮೂರು ಸ್ಥಾನಗಳನ್ನು ಒಂದು ಸ್ಥಾನಕ್ಕೆ ಇಳಿಸಿದ ಕ್ರಮವನ್ನು ಪ್ರತಿಭಟಿಸಿ ಕೈಗಾರಿಕಾ ಸಮಿತಿಯಲ್ಲಿ ಸಿಐಟಿಯುಗೆ ನ್ಯಾಯವಾದ ಪ್ರಾತಿನಿಧ್ಯವನ್ನು ಕೊಡಬೇಕೆಂದು ಒತ್ತಾಯಪಡಿಸಲಾಯಿತು.

1973 ಫೆಬ್ರವರಿಯಲ್ಲಿ ರಾಜ್ಯಸಭೆಯಲ್ಲಿ ಮಂಡಿಸಲ್ಪಟ್ಟು ಸಂಸತ್ತಿನಲ್ಲಿ ಪಾಸಾಗಿ 1981 ಡಿಸೆಂಬರಿನಲ್ಲಿ ಶಾಸನವಾದ ಪ್ಲಾಂಟೇಷನ್ ಲೇಬರ್ (ಅಮೆಂಡ್‌ಮೆಂಟ್). ಆಕ್ಟಿಗೆ ಶ್ರೀ ಗುಂಡೂರಾಯರ ಸರ್ಕಾರವು 1982ರ ಕೊನೆಯವರೆಗೆ ನಿಯಮಗಳನ್ನು ರಚಿಸಲಿಲ್ಲ. ಪ್ಲಾಂಟೇಷನ್ ಲೇಬರ್ (ಅಮೆಂಡ್‌ಮೆಂಟ್) ಶಾಸನಕ್ಕೆ ಕೂಡಲೇ ನಿಯಮಾವಳಿಯನ್ನು ರಚಿಸಬೇಕೆಂದು ಕರ್ನಾಟಕ ಸರ್ಕಾರವನ್ನು ಒತ್ತಾಯಿಸಿತು.

ಸಾಮ್ರಾಜ್ಯಶಾಹಿ ಯುದ್ಧ ಪ್ರಯತ್ನಗಳನ್ನು ವಿರೋಧಿಸಿ ಜಾಗತಿಕ ಶಾಂತಿ ರಕ್ಷಣೆಯ ಚಳುವಳಿಯಲ್ಲಿ ಪಾಲ್ಗೊಳ್ಳಲು ಕರೆ ಕೊಡುವ, ಅಸ್ಸಾಮಿನಲ್ಲಿ ನಡೆಯುತ್ತಿರುವ ವಿಚ್ಛಿದ್ರಕಾರಿ, ಪ್ರತ್ಯೇಕತಾವಾದಿ ಚಳುವಳಿಯನ್ನು ಖಂಡಿಸುವ ನಿರ್ಣಯಗಳನ್ನು ಸಭೆಯು ಅಂಗೀಕರಿಸಿತು.

ಕೇರಳದ ತೋಟ ಕಾರ್ಮಿಕರಿಗೆ ಸಿಕ್ಕುತ್ತಿರುವ ಕೂಲಿ ಮತ್ತು ತುಟ್ಟಿ ಭತ್ತೆಗಳಿಗೆ ಕಡಿಮೆ ಇಲ್ಲದಂತೆ ರಾಜ್ಯದ ತೋಟ ಕಾರ್ಮಿಕರಿಗೆ ಕನಿಷ್ಠ ಕೂಲಿಯನ್ನು ನಿಗದಿ ಮಾಡಬೇಕೆಂದು ಕೇಳಿಕೊಳ್ಳಲಾಯಿತು.

ತೋಟ ಕಾರ್ಮಿಕರು ತಮ್ಮ ಬೇಡಿಕೆಗಳ ಜತೆಗೆ ಮಳೆಯ ಅಭಾವದಿಂದ ಕಷ್ಟಕ್ಕೆ ಗುರಿಯಾಗಿರುವ ಸಣ್ಣ ಕಾಫಿ ಪ್ಲಾಂಟರುಗಳ ಬೇಡಿಕೆಗಳಿಗಾಗಿ ಐಕ್ಯ ಚಳುವಳಿಯನ್ನು ಸಂಘಟಿಸಲು ಸಭೆ ಕರೆ ಕೊಟ್ಟಿತು.

6-5-83 ರಿಂದ ತಮ್ಮ ಬೇಡಿಕೆಗಳಿಗಾಗಿ ಹೋರಾಡುತ್ತಿರುವ ಬೇಲೂರು ತಾಲ್ಲೂಕಿನ ನಂದಿಗೋಡು ಎಸ್ಟೇಟಿನ ಹರಿಜನ ಕಾರ್ಮಿಕರಿಗೆ ಬೆಂಬಲ ಕೊಡುವ ಠರಾವನ್ನು ಸಭೆಯು ಅಂಗೀಕರಿಸಿತು.

ಮುಂದಿನ ಅವಧಿಗೆ ಸಿ. ನಂಜುಂಡಪ್ಪ, ಅಧ್ಯಕ್ಷರು. ಎ. ಕೆ. ವಿಶ್ವನಾಥ್, ಕೆ. ವೇಲಾಯುಧ ಉಪಾಧ್ಯಕ್ಷರು, ಎ. ಸಿ ಕೇಶವ ಕಾರ್ಯದರ್ಶಿ, ಕೆ. ಸುಕುಮಾರ್, ಜಿ. ಎಸ್. ರಾಘವೇಂದ್ರ ಉಪಕಾರ್ಯದರ್ಶಿಗಳು, ವಿ. ಸುಕುಮಾರ್-ಖಜಾಂಚಿ, ಮಾರಿಮುತ್ತು-ಸಂಘಟಕ ಈ ಪದಾಧಿಕಾರಿಗಳೂ ಸೇರಿರುವ 28 ಸದಸ್ಯರ ಕಾರ್ಯಕಾರಿ ಸಮಿತಿಯನ್ನು ಸಭೆಯು ಚುನಾಯಿಸಿತು.

ಸೋವಿಯತ್ ಒಕ್ಕೂಟದ ಅಧ್ಯಕ್ಷರಾಗಿ ಯೂರಿ ಅಂಡ್ರೊಪೊವ್ ಆಯ್ಕೆ

ಸಿಪಿಎಸ್‌ಯು ಕೇಂದ್ರ ಸಮಿತಿ ಮಹಾ ಕಾರ್ಯದರ್ಶಿ ಯೂರಿ ಆಂಡ್ರೊಪೊವ್ ಅವರು ಜೂನ್ 16ರಂದು ಸೋವಿಯೆತ್ ಒಕ್ಕೂಟ ಸುಪ್ರೀಂ ಸೋವಿಯೆತ್‌ನ ಪ್ರಿಸೀಡಿಯಂನ ಅಧ್ಯಕ್ಷರಾಗಿ ಆಯ್ಕೆಯಾದರು. ಸುಪ್ರೀಂ ಸೋವಿಯೆತ್‌ನ ಎರಡೂ ಸದನಗಳ ಜಂಟಿ ಸಮಾವೇಶದಲ್ಲಿ ಈ ಆಯ್ಕೆ ನಡೆಯಿತು. ಸೋವಿಯೆತ್ ಪಾರ್ಲಿಮೆಂಟಿನ ಅಧಿವೇಶನವೂ ಇಂದು ಕ್ರೆಮ್ಲಿನ್‌ನಲ್ಲಿ ಆರಂಭವಾಯಿತು.

ಸೋವಿಯೆತ್ ಒಕ್ಕೂಟದ ಈ ಅತ್ಯುನ್ನತ ಹುದ್ದೆಗೆ ಯೂರಿ ಆಂಡ್ರೊಪೊವ್ ಅವರ ಹೆಸರನ್ನು ಪಾಲಿಟ್‌ಬ್ಯೂರೋ ಸದಸ್ಯ ಹಾಗೂ ಸಿಪಿಎಸ್‌ಯು ಕೇಂದ್ರ ಸಮಿತಿ ಕಾರ್ಯದರ್ಶಿಯಾದ ಕೊನ್‌ಸ್ಟಾಂತಿನ್ ಚೆರ್ನೆಂಕೊ ಅವರು ಮಂಡಿಸಿದರು.

ಸಿಪಿಎಸ್‌ಯು ಕೇಂದ್ರ ಸಮಿತಿ ಮಹಾ ಕಾರ್ಯದರ್ಶಿ ಹುದ್ದೆಯಲ್ಲಿ ಯೂರಿ ಅಂಡ್ರೊಪೊವ್ ಅವರು ತೋರಿರುವ ಧ್ಯೇಯಪೂರ್ಣ, ಸಾಮರ್ಥ್ಯಯುತ ಹಾಗೂ ದೂರದರ್ಶಿ ನಾಯಕತ್ವ, ಅವರ ಕಾರ್ಯ ದಕ್ಷತೆ, ಮಾನವೀಯ ಗುಣಗಳು, ಅನುಭವ ಮತ್ತು ರಾಜಕೀಯ ವಿವೇಕಗಳು ಅವರಿಗೆ ಪಾರ್ಟಿ ಹಾಗೂ ಜನತೆಯ ಗೌರವ, ಆದರ ಹಾಗೂ ಸಹಾನುಭೂತಿಗಳನ್ನು ತಂದುಕೊಟ್ಟಿವೆ. ಸೋವಿಯೆತ್ ಕಮ್ಯೂನಿಸ್ಟರು, ಎಲ್ಲ ಕಾರ್ಮಿಕ ಜನತೆ, ನಮ್ಮ ವಿದೇಶೀ ಮಿತ್ರರು ಅವರಲ್ಲಿ ಲೆನಿನ್ ಮಾದರಿಯ ಅಸಾಧಾರಣ ನಾಯಕತ್ವವನ್ನು ಗುರುತಿಸಿರುವರು ಎಂದೂ ಚೆರ್ನೆಂಕೋ ವರ್ಣಿಸಿರುವರು.

ಪಾರ್ಟಿ ಮತ್ತು ಜನತೆಯ ಐಕ್ಯವನ್ನು ಇನ್ನಷ್ಟು ಸುದೃಢಗೊಳಿಸುವ ನಮ್ಮ ಆಂತರಿಕ ಮತ್ತು ವಿದೇಶಾಂಗ ನೀತಿಗಳನ್ನು ನಿರಂತರವಾಗಿ ಅನುಸರಿಸಿಕೊಂಡು ಹೋಗುವ, ನಮ್ಮ ತಾಯ್ನಾಡಿನ ಆರ್ಥಿಕ ಮತ್ತು ರಕ್ಷಣಾ ಬಲವನ್ನು ಬಲಪಡಿಸುವ ಸಮಸ್ತ ಜನತೆಯ ಆಶೋತ್ತರಗಳು ಯೂರಿ ಅಂಡ್ರೊಪೊವ್ ಅವರ ಕಾರ್ಯದಲ್ಲಿ ಏಕತ್ರವಾಗಿವೆ ಎಂದೂ ಅವರು ವರ್ಣಿಸಿದರು.

ವಿವಾಹ

ಕಾ. ನಾರಾಯಣ್ ಮತ್ತು ಗಿರಿಜಾ ಅವರು ದಿನಾಂಕ 13-4-83 ರಂದು ರಾಯಚೂರಿನಲ್ಲಿ ಅಂತರ್ಜಾತಿ ವಿವಾಹವಾದರು. ತಮ್ಮ ವಿವಾಹದ ಸವಿನೆನಪಿಗಾಗಿ 50 ರೂಗಳನ್ನು 'ಐಕ್ಯರಂಗ'ಕ್ಕೆ ನೀಡಿದ್ದಾರೆ.

ನೂತನ ವಧೂವರರಿಗೆ 'ಐಕ್ಯರಂಗ' ಕ್ರಾಂತಿಕಾರೀ ಶುಭಾಶಯವನ್ನು ಕೋರುತ್ತದೆ.

* * *

ಕುಂದಾಪುರ ತಾಲೂಕು ರೈತ ಸಂಘದ ಉಪಾಧ್ಯಕ್ಷರಾದ ಕಾ। ಶಿವರಾಮ ಶೆಟ್ಟಿಯವರ ಪುತ್ರ **ಸಂತೋಷ** ಅವರು **ನಾಗರತ್ನಮ್ಮ** ಅವರನ್ನು ತಾ॥ 15-5-83 ರಂದು ಕುಂದಾಪುರ ಕೋಟೇಶ್ವರದಲ್ಲಿ ವಿವಾಹವಾದರು. ಈ ವಿವಾಹದ ಸವಿನೆನಪಿಗಾಗಿ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಾರ್ಟಿಯ ದ. ಕ. ಜಿಲ್ಲಾ ಸಮಿತಿಗೆ ರೂ. 100ನ್ನು ನೀಡಿದ್ದಾರೆ. ವಧೂವರರಿಗೆ ಪಕ್ಷವು ಶುಭಾಶಯಗಳನ್ನರ್ಪಿಸುತ್ತದೆ.

ಉಪವಾಸ ಸತ್ಯಾಗ್ರಹ ಮುಂದೂಡಲಾಗಿದೆ

ದಿನಾಂಕ 16-6-1983 ರಿಂದ ಮೇಲ್ಕಂಡ ಒಕ್ಕೂಟದ ಸಭೆಯು, ಒಕ್ಕೂಟದ ಅಧ್ಯಕ್ಷರೂ ಮತ್ತು ಶಾಸನ ಸಭೆಯ ಸದಸ್ಯರಾದ ಶ್ರೀ ಎಸ್. ಸೂರ್ಯನಾರಾಯಣರಾವ್‌ರವರ ಅಧ್ಯಕ್ಷತೆಯಲ್ಲಿ ಸೇರಿ 35 ಸಾವಿರ ದಿನಗೂಲಿ ನೌಕರರ ಸಮಸ್ಯೆಗಳ ಬಗ್ಗೆ ದೀರ್ಘವಾಗಿ ಚರ್ಚಿಸಿತು. ಹಿಂದಿನ ಸಭೆಯಲ್ಲಿ ತೀರ್ಮಾನ ಮಾಡಲಾಗಿದ್ದ "ಉಪವಾಸ ಮುಷ್ಕರವನ್ನು ಮುಂದೂಡಲಾಯಿತು" ಸರಕಾರ ದಿನಾಂಕ 15-6-83ರಂದು ವಿರೋಧ ಪಕ್ಷಗಳ ಸಭೆಯನ್ನು ಕಾರ್ಮಿಕರ ಸಮಸ್ಯೆಗಳನ್ನು ಚರ್ಚಿಸಿ ಪ್ರಾಮಾಣಿಕ ಪ್ರಯತ್ನ ಮಾಡುತ್ತಿರುವುದರಿಂದ ವಿರೋಧ ಪಕ್ಷಗಳ ಮುಖಂಡರ ಸಭೆಯನ್ನು ಕರೆದು ನೌಕರರ ಸಮಸ್ಯೆಯನ್ನು ಚರ್ಚಿಸಿ ಪ್ರಾಮಾಣಿಕ ಪ್ರಯತ್ನವನ್ನು ಸಭೆಯಲ್ಲಿ ಸ್ವಾಗತಿಸಲಾಯಿತು. ಎಲ್ಲಾ ದಿನಕೂಲಿ ನೌಕರರನ್ನು ಖಾಯಂ ಮಾಡುವಂತೆ ಸರಕಾರವನ್ನು ಸಭೆಯು ಒತ್ತಾಯಿಸಿತು. ದುಡಿದ ಸಂಬಳವನ್ನು ಪ್ರತಿ ತಿಂಗಳು 5ನೇ ತಾರೀಖಿನ ಒಳಗೆ ಕೊಡಬೇಕೆಂದು ಸರಕಾರವನ್ನು ಒತ್ತಾಯ ಮಾಡಲಾಯಿತು. ಈಗಾಗಲೇ ಒಕ್ಕೂಟದ ಕಾರ್ಯದರ್ಶಿಯವರಾದ ಶ್ರೀಯುತ ಶೇಟಿಯವರನ್ನು ಮತ್ತು ಅನೇಕ ನೌಕರರನ್ನು ಕೆಲಸದಿಂದ ಅಕ್ರಮವಾಗಿ ತೆಗೆದಿರುವುದನ್ನು ಸಭೆಯು ಖಂಡಿಸಿತು. ಕೂಡಲೇ ಎಲ್ಲರನ್ನೂ ಕೆಲಸಕ್ಕೆ ತೆಗೆದುಕೊಳ್ಳಬೇಕೆಂದು ಸರ್ಕಾರವನ್ನು ಒತ್ತಾಯ ಮಾಡಲಾಯಿತು. ಮುಂದೆ ಯಾರನ್ನೇ ಆಗಲಿ ಅಕ್ರಮವಾಗಿ ಕೆಲಸದಿಂದ ತೆಗೆಯಬಾರದೆಂದು ಸರ್ಕಾರಕ್ಕೆ ಸಭೆಯು ಮನವಿ ಮಾಡಿತು. ಕನಿಷ್ಠ ಕೂಲಿಯನ್ನು ಅನೇಕ ಕಡೆ ಜಾರಿ ಮಾಡಿರುವುದನ್ನು ಸಭೆ ಖಂಡಿಸಿತು ಮತ್ತು ಕೂಡಲೇ ಕನಿಷ್ಠ ಕೂಲಿ ಜಾರಿ ಮಾಡುವಂತೆ ಒತ್ತಾಯ ಮಾಡಿತು. ಅಧಿಕಾರಿಗಳಿಗೆ ಮತ್ತು ವಿರೋಧ ಪಕ್ಷಗಳ ಸಭೆಯನ್ನು ಕರೆದು ಸೂಕ್ತವಾದ ತೀರ್ಮಾನಕ್ಕೆ ಬರಬೇಕೆಂದು ಸಭೆಯು ಸರ್ಕಾರಕ್ಕೆ ಮನವಿ ಮಾಡಲಾಗಿದೆ ಎಂದು ಕಾ॥ ಆರ್. ಶ್ರೀನಿವಾಸ್‌ರವರು ತಿಳಿಸಿದ್ದಾರೆ.

ರಾಷ್ಟ್ರೀಯ ಸಮಗ್ರತಾ ದಿನಾಚರಣೆ

ಜೂನ್ 2ರಂದು ಡಿ.ವೈ.ಎಫ್.ಐ. ರಾಜ್ಯ ಸಂಘಟನಾ ಸಮಿತಿಯ ಕರೆಯ ಮೇರೆಗೆ, ಬೆಂಗಳೂರಿನಲ್ಲಿ 3 ಕಡೆ ರಾಷ್ಟ್ರೀಯ ಸಮಗ್ರತಾ ದಿನಾಚರಣೆಯನ್ನು ಆಚರಿಸಲಾಯಿತು. ಅಸ್ಸಾಂನ ಪ್ರತ್ಯೇಕತಾ ಚಳುವಳಿ, ತ್ರಿಪುರಾದ ಉಪಜಾತಿ ಸಮಿತಿ ಹಾಗೂ ರಾಷ್ಟ್ರದ ಒಡಕಿನ ಪ್ರಯತ್ನದಲ್ಲಿರುವ ಇತರ ಜಾತೀಯ ಹಾಗೂ ಕೋಮು ಶಕ್ತಿಗಳೂ ಮತ್ತು ಅಮೆರಿಕ ಸಾಮ್ರಾಜ್ಯಶಾಹಿಗಳ ಹಿತೂರಿ ಮುಂತಾದ ಸಮಸ್ಯೆಗಳನ್ನು ರಾಜ್ಯ ಸಂಚಾಲಕರಾದ ಕಾ। ಎಸ್. ಶಿವರಾಂ ಅವರು ವಿವರಿಸಿ ಈ ಶಕ್ತಿಗಳ ವಿರುದ್ಧ ಡಿ.ವೈ.ಎಫ್.ಐ. ಹಾಗೂ ಇತರ ಪ್ರಜಾಸತ್ತಾತ್ಮಕ ಶಕ್ತಿಗಳು ಒಗ್ಗೂಡಿ ಈ ವಿಛಿದ್ರಕಾರಿ ಶಕ್ತಿಗಳನ್ನು ವಿರೋಧಿಸಬೇಕೆಂದು ಕರೆ ನೀಡಿದರು.

Printed & Published by P. Ramachandra Rao by him on behalf of the Communist Party of India (Marxist) Karnataka State Committee L-56 K. V. Temple Street Sultanpet, Bangalore 560053. Editorial and managerial office : L-56, K. V. Temple Street, Sultanpet, B-53. Phone : 24154
Printed at Karnataka Pressmen Associates (P) Limited, 54/1, K. R. Road, Bangalore-4 Editor: P. RAMACHANDRA RAO